

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 264 | Saturday 09-03-2024 | E-mail : maruti.b.hosamani76@gmail.com | Page: 4 | Price : Rs. 1/-


## ಎಂ.ಬಿ. ಅಯ್ಯನಹಳ್ಳಿ ಗ್ರಾಮದಲ್ಲಿ ಬಿಜೆಪಿ ಗ್ರಾಮ ಚಲೋ ಪರಿಕ್ರಮ ಯಾತ್ರೆಗೆ ಚಾಲನೆ



**ಕಾನಾ ಹೊಸಹಳ್ಳಿ:** ಕೇಂದ್ರಸರಕಾರ ಮಾಡಿರುವ ವಿವಿಧ ಸಾಧನೆಗಳ ಬಗ್ಗೆ ಹಾಗೂ ಗ್ರಾಮ ಚಲೋ ಪರಿಕ್ರಮ ಯಾತ್ರೆ ಕಾರ್ಯಕ್ರಮ ನೆರವೇರಿತು. ದೇಶದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿ.ಜೆ.ಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ.ಎಸ್. ಪಾಟೀಲ ಅವರ ಸೂಚನೆಯಂತೆ ಗ್ರಾಮ ಪರಿಕ್ರಮ ಯಾತ್ರೆ ಹಮ್ಮಿಕೊಂಡಿದ್ದು. ಕೂಡ್ಲಿಗಿ ವಿಧಾನಸಭೆ ಕ್ಷೇತ್ರದ ಎಂ ಬಿ ಅಯ್ಯನಹಳ್ಳಿ ಗ್ರಾಮದಲ್ಲಿ ದೀಪ ಬೆಳಗುವುದರ ಮೂಲಕ ಚಾಲನೆ ನೀಡಲಾಯಿತು.

ಈ ವೇಳೆ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷರಾದ ಎಚ್ ರೇವಣ್ಣ ಮಾತನಾಡಿ ಕೇಂದ್ರದಿಂದ ನೈಸರ್ಗಿಕ ಕೃಷಿಗೆ ನೀಡಲಾಗಿರುವ ಒತ್ತು, 23 ಬೆಳೆಗಳಿಗೆ ಬೆಂಬಲ ಘೋಷಣೆ ಮಾಡಿರುವುದು, ಫಸಲ್ ಬಿಮಾ ಯೋಜನೆ, ಕಿಸಾನ್ ಸಮ್ಮಾನ್ ಯೋಜನೆ, ಸಿಂಚಾಯಿ ಯೋಜನೆ, ಕೃಷಿ ರಫ್ತು, ಕೃಷಿ ಬಜೆಟ್ಗೆ ನೀಡುವ ಹಣ ಹೆಚ್ಚಳ, ರೈತರಿಗೆ ಮಣ್ಣಿನ ಕಾರ್ಡ್ ವಿತರಣೆ, ರಸಗೊಬ್ಬರಗಳ ಸಬ್ಸಿಡಿ 500 ರಷ್ಟು ಏರಿಕೆ ಸೇರಿದಂತೆ ಕೇಂದ್ರದ ಅನೇಕ ಯೋಜನೆಗಳನ್ನು ರೈತ ಕುಟುಂಬಗಳಿಗೆ ವಿತರಿಸಲಾಗುವುದು ಎಂದು ಹೇಳಿದರು.

ಈ ವೇಳೆ ಲೋಕಸಭಾ ಚುನಾವಣೆಯ ಉಸ್ತುವಾರಿಗಳು ಸೂರ್ಯ ಪಾಪಣ್ಣ ಮಾತನಾಡಿ ಲೋಕಸಭಾ ಚುನಾವಣೆಯಲ್ಲಿ ಜನರು ಕಾಂಗ್ರೆಸ್ಗೆ ತಕ್ಕ ಪಾಠ ಕಲಿಸಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 28 ಕ್ಷೇತ್ರಗಳನ್ನು ಗೆಲ್ಲಿಸುವುದಾಗಿ ಹೇಳಿದ್ದಾರೆ. ಅವರೊಂದಿಗೆ ನಾವು ನಿಲ್ಲಬೇಕು. ರೈತರ ಕಲ್ಯಾಣಕ್ಕಾಗಿ ಮತ್ತೆ ನರೇಂದ್ರ ಮೋದಿಯವರನ್ನು ಪ್ರಧಾನಿಯಾಗಿಸ ಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ತೆಗೆದು ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಂಕರ ನವಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಮಂಡಲ ರೈತ ಮೋರ್ಚಾ ಅಧ್ಯಕ್ಷ ಯಜಮಾನಪ್ಪ ಜಿ, ಕೂಡ್ಲಿಗಿ ಮಂಡಲ ಅಧ್ಯಕ್ಷ ಕಾಮಶೆಟ್ಟಿ ನಾಗರಾಜ್, ಸಹ ಉಸ್ತುವಾರಿಗಳು ಕೆ ಚೆನ್ನಪ್ಪ, ರೈತ ಮೋರ್ಚಾ ಜಿಲ್ಲಾ ಖಜಾಂಚಿ ಚಂದ್ರಮೌಳಿ, ಜಿಲ್ಲಾ ರೈತ ಮೋರ್ಚ ಉಪಾಧ್ಯಕ್ಷ ಕಲ್ಲೇಶ ಗೌಡ್ರು, ಜಿಲ್ಲಾ ಕಾರ್ಯದರ್ಶಿ ರೇಖಾ ಮಲ್ಲಿಕಾರ್ಜುನ್, ಬಿಜೆಪಿ ಮುಖಂಡರಾದ ನಾಗಭೂಷಣ್, ಸಣ್ಣ ಬಾಲಪ್ಪ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ವೀರಭದ್ರಪ್ಪ ಎಚ್ ಕೆ ಶಾಂತನಹಳ್ಳಿ, ಪಿ ನಾಗರಾಜ್, ರೈತ ಮೋರ್ಚಾ ಉಪಾಧ್ಯಕ್ಷ ಯರಮ್ಮನಹಳ್ಳಿ ಬಿ ಉಮೇಶ್, ಶ್ರೀಧರ ಮೂರ್ತಿ, ಓಬಿಸಿ ಮೋರ್ಚಾ ಅಧ್ಯಕ್ಷ ವಸಂತಗೌಡ್ರು, ಎಸ್ಸಿ ಮೋರ್ಚಾ ಅಧ್ಯಕ್ಷ ರಾಮಸ್ವಾಮಿ, ಪಾಪ ನಾಯಕ, ಮಂಡಲ ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಜಿಲ್ಲಾ ಎಸ್ ಟಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಮಾರೇಶ್, ಆಲೂರು ಶ್ರೀಧರ ಮೂರ್ತಿ ಎಸ್.ಟಿ ಮೋರ್ಚಾ ಉಪಾಧ್ಯಕ್ಷ ಆಂಜಿನಪ್ಪ ಅಮಲಾಪುರ, ಮಂಜುನಾಥ ಕೆ.ಬಿ ಹಟ್ಟಿ ಹಾಗೂ ರೈತ ಮೋರ್ಚಾದ ಎಲ್ಲಾ ಪದಾಧಿಕಾರಿಗಳು ವಿವಿಧ ಮೋರ್ಚಾದ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ರೈತರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ : ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**

## ಕಳಪೆ ಕಾಮಗಾರಿಗೆ ಸಾರ್ವಜನಿಕರಿಂದ–ಆಕ್ರೋಶ





**ಕೋಗಳಿ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೋಗಳಿ ಗ್ರಾಮದಲ್ಲಿ ಸಮುದಾಯ ಭವನ ಕಳಪೆ ಕಾಮಗಾರಿ ವಿರುದ್ಧ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ಕನ್ನಡದ ಪ್ರಪ್ರಥಮ ಗದ್ಯ ಕವಿ ಶಿವಕೋಟ್ಯಾಚಾರ್ಯರ ನೆನಪಿಗೋಸ್ಕರ ಸುವರ್ಣ ಗ್ರಾಮದ ಯೋಜನೆಯಲ್ಲಿ ಕೋಟಿ ಕೋಟಿ ಅನುದಾನ ಬಂದಿತ್ತು ಅದರಲ್ಲಿ ಈ ಸಮುದಾಯ ಭವನವನ್ನು ನಿರ್ಮಾಣವಾಗಿತ್ತು ಆದರೆ ಈ ಹತ್ತು ವರ್ಷದಲ್ಲಿ ಈ ಭವನವು ತುಂಬಾ ದುರಸ್ತಿ ಗೊಂಡಿದೆ ಇದ–ಕ್ಕೆ ಯಾವ ಒಂದು ಅಧಿಕಾರಿಯು ತಿರುಗಿ ನೋಡಿದ್ದಿಲ್ಲ ಆದರೆ ಈಗ ಅನೇಕ ಬಾರಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸುವುದರ ಮೂಲಕ ಈಗ ಇದರ ದುರಸ್ಥಿ ಮತ್ತು ಬಣ್ಣ ಹಚ್ಚಲು 1,999,000 ವೆಚ್ಚದಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ಆದರೆ ಇಲ್ಲಿ ಕೇವಲ ಬಣ್ಣ ಹಚ್ಚುವ ಕೆಲಸ ಮಾಡುತ್ತಾರೆ ಇಲ್ಲಿನ ಕಿಟಕಿ ಬಾಗಿಲು ಮತ್ತು ಸೀಳು ಬಿಟ್ಟಿರುವ ಗೋಡೆ ಒಡೆದು ಹೋಗಿರುವ ಕಡಪ ಆಗುವ ವಿದ್ಯುತ್ ವ್ಯವಸ್ಥೆ ಅಸ್ತವ್ಯಸ್ತವಾಗಿದೆ ಇದ್ಯಾವುದೂ ಮಾಡದೆ ಕೇವಲ ಬಣ್ಣವನ್ನು ಹಚ್ಚಿ ಬಿಲ್ಲು ಪಡೆದು ಹೊಂಟಿದ್ದಾರೆ ಇಲ್ಲಿನ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇದರ ಬಗ್ಗೆ ಗಮನ ಹರಿಸಿ ಸಾರ್ವಜನಿಕರ ಹಣ ದುರುಪಯೋಗ ಆಗದಂತೆ ನೋಡಿ ಕೊಳ್ಳಬೇಕು ಇಲ್ಲಿ ಶಿವಕೋಟ್ಯಾಚಾರ್ಯರ ಸವಿನೆನಪಿಗಾಗಿ ಸಾಮೂಹಿಕ ಮದುವೆ ಇತರೆ ಯಾವುದೇ ಮದುವೆ ಕಾರ್ಯಕ್ರಮ ಆದರೆ ಇಲ್ಲೇ ನಡೆಸುತ್ತೇವೆ ಆದ ಕಾರಣ ಶ್ರೀ ಶಿವಕೋಟ್ಯಾಚಾರ್ಯರ ಸಭಾಭವನಕ್ಕೆ ಸುತ್ತ ಮುತ್ತಲು ದನಗಳು ಕಟ್ಟುವುದು ಕಟ್ಟಿಗೆ ಹಾಕುವುದು ಹಾಗೂ ಇಲ್ಲಿನ ನೀರಿನ ತೊಟ್ಟಿ ಇದ್ದು ಅದರ ಮುಚ್ಚಳ ದುರಸ್ಥಿಯಲ್ಲಿದೆ ಇಂತಹ ಸಮಸ್ಯೆಗಳು ತುಂಬಾನೇ ಇವೆ ಆದ ಕಾರಣ ಇಲ್ಲಿನ ಅಧಿಕಾರಿಗಳು ಎಚ್ಚರ ವಹಿಸಿ ಕಾಮಗಾರಿ ಮಾಡಿ ಕೊಳ್ಳಬೇಕೆಂದು ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಮತ್ತು ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಸುದ್ದಿಯೊಂದಿಗೆ ಸಮುದಾಯ ಭವನದ ಕಾಮಗಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

15. ನೇ ಹಣಕಾಸಿನಲ್ಲಿ 1,999,000 ವೆಚ್ಚದ ಕಾಮಗಾರಿಯನ್ನು ಕೇವಲ ಕಳಪೆ ಬಣ್ಣ ಹಚ್ಚಿ ಬಿಲ್ಲು ಎತ್ತಲು ಹೊರಟಿದ್ದಾರೆ ಇದರ ಬಗ್ಗೆ ಪಿಡಿಒ ಅಧಿಕಾರಿಗಳನ್ನು ಕೇಳಿದರೆ ಒಂದು ಸಲ ಬಣ್ಣ ಹಚ್ಚಲು ಹೇಳಿದ್ದಾರೆ ಎನ್ನುತ್ತಾರೆ ಮತ್ತೊಂದು ಸಲ ದುರಸ್ತಿ ಮತ್ತು ಬಣ್ಣ ಎರಡು ಮಾಡಬೇಕು ಎಂದು ವಾಟ್ಸಾಪ್ನಲ್ಲಿ ಕಳಿಸಿದ್ದಾರೆ ಎಂದು ಹೇಳುತ್ತಾರೆ ಈ ಕಾಮಗಾರಿ ಬಗ್ಗೆ ಪ್ರಶ್ನೆ ಮಾಡಿದರೆ ಗುತ್ತಿಗೆದಾರರು ಹಾಗೂ ಅವರ ಬೆಂಬಲಿಗರು ನಮ್ಮ ಮೇಲೆ ದೌರ್ಜನ್ಯ ಮಾಡುತ್ತಾರೆ ಹಾಗೂ ಇಲ್ಲಿ ತುಂಬಾ ಕಳಪೆ ಕಾಮಗಾರಿಯಾಗಿದೆ ಬಣ್ಣದ ಕ್ವಾಲಿಟಿ ಕಮ್ಮಿ ಇದೆ ಎಂದು ಆರ್ ಟಿ ಐ ಕಾರ್ಯಕರ್ತರಾದ ಬಸವರಾಜ್ ಕೋಗಳಿ ಹೇಳಿದರು. ಈ ಸಂದರ್ಭದಲ್ಲಿ ಎನ್ ವಿಶ್ವನಾಥ್ ಗೌಡ, ಎಂ ಮಹೇಶಪ್ಪ ,ರವಿ ವಿ , ಎಮ್ ಚನ್ನಬಸಪ್ಪ, ಜಿ ಸಂಗನಗೌಡ ,ಪಂಪಣ್ಣ, ಮರಳು ಸಿದ್ದಯ್ಯ, ಅಶೋಕಯ್ಯ ಮತ್ತಿತರರು ಊರಿನ ಮುಖಂಡರು ಸಾರ್ವಜನಿಕರು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್. ಸಿ. ಕೊಟ್ಟೂರು**

## ಡಾ.ಪ್ರಭು ಗಂಜಿಹಾಳ ಅಯೋಧ್ಯೆ ಕವಿ ಸಮ್ಮೇಲನಕ್ಕೆ ಆಯ್ಕೆ



**ಗದಗ :** ಉತ್ತರಪ್ರದೇಶದ ಅಯೋಧ್ಯೆಯಲ್ಲಿ ಮಾ.15 ರಂದು ನಡೆಯಲಿರುವ ರಾಮೋತ್ಸವ–24ರ 'ಕವಿ ಸಮ್ಮೇಲನ' ದಲ್ಲಿ ಕಾವ್ಯ ವಾಚನಕ್ಕೆ ಕವಿ, ಕನ್ನಡ ಸಹಪ್ರಾಧ್ಯಾಪಕ ಡಾ.ಪ್ರಭು ಗಂಜಿಹಾಳ ಆಯ್ಕೆ ಆಗಿದ್ದಾರೆ.

ಅಯೋದ್ಯೆಯಲ್ಲಿ ಜನೇವರಿ 14 ರಿಂದ ಆರಂಭವಾಗಿರುವ ರಾಮೋತ್ಸವ ಸಮಿತಿ –2024 ರ ಕಾರ್ಯಕ್ರಮಗಳು ಮಾ.24 ರವರೆಗೂ ನಡೆಯಲಿದ್ದು, ಮಾ.15ರಂದು ಬಹುಭಾಷಾ ಕವಿ ಸಮ್ಮೇಲನ ಬಿಹಾರದ ಕವಿ,ಸಾಹಿತಿಗಳಾದ ಈಶ್ವರ ಚಂದ್ರ ಝಾ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ ಎಂದು ರಾಮೋತ್ಸವ–2024ರ ಸಮಿತಿ–5ರ ಸಂಯೋಜಕ ಅಶುತೋಶ ದ್ವಿವೇದಿ ತಿಳಿಸಿದ್ದಾರೆ. ಕಾವ್ಯವಾಚನಕ್ಕೆ ಆಯ್ಕೆ ಆಗಿರುವ ಡಾ.ಪ್ರಭು ಗಂಜಿಹಾಳ ರೋಣ ತಾಲೂಕಿನ ಹೊಳೆಆಲೂರಿನ ಶ್ರೀ ಕಲ್ಮೇಶ್ವರ ಕಲಾ,ವಿಜ್ಞಾನ,ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾರೆ.

ಕವಿಸಮ್ಮೇಲನದಲ್ಲಿ ಪಾಲ್ಗೊಳ್ಳುತ್ತಿರುವ ಇವರಿಗೆ ನಿವೃತ್ತ ತೋಟಗಾರಿಕಾ ಅಧಿಕಾರಿ ಸಿ.ಆರ್.ಗೌಡರ, ಪ್ರಾಚಾರ್ಯ ಡಾ.ಪಿಎಸ್.ಕಣವಿ, ಡಾ.ಎಸ್.ಬಿ.ಸಜ್ಜನರ್ ಮತ್ತು ಮಹಾವಿದ್ಯಾಲಯದ ಸಿಬ್ಬಂದಿವರ್ಗ, ಕನ್ನಡ ಸಾಹಿತ್ಯ ಪರಿಷತ್ ಗದಗ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ, ಡಾ.ರಾಜಶೇಖರ ದಾನರಡ್ಡಿ, ಪ್ರೊ.ವಿ.ಎಂ.ಗುರುಮಠ, ಪತ್ರಕರ್ತರಾದ ಮೌನೇಶ ಬಡಿಗೇರ, ಡಾ.ವೀರೇಶ ಹಂಡಿಗಿ, ರಾಘವೇಂದ್ರ ಕುಲಕರ್ಣಿ, ಪ್ರಾ.ಬಸವರಾಜ ಗಂಜಿಹಾಳ, ಸಾಹಿತಿಗಳು ,ಕಲಾವಿದರು ಮತ್ತು ಪತ್ರಕರ್ತ ಬಳಗದ ಸದಸ್ಯರು ಅಭಿನಂದಿಸಿದ್ದಾರೆ.

## ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ





**ಹುಣಶ್ಯಾಳ :** ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ಪ್ರಗತಿ ಕನ್ನಡ ಮಾಧ್ಯಮ ಪ್ರಥಮಿಕ ಹಾಗೂ ಪ್ರೌಢಶಾಲೆ ಹುಣಶ್ಯಾಳ. ವಾರ್ಷಿಕ ಸ್ನೇಹ ಸಮ್ಮೇಳನ ಎಸ್. ಎಸ್.ಎಲ್.ಸಿ.ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ. ಸಾನಿಧ್ಯ ಮೌಲಾನ ಅಬ್ದುಲರಜಾಕ ಮೊವಿ?ನ ಹುಣಶ್ಯಾಳ, ದತ್ತಾತ್ರೇಯ ಹೊಸಮಠ ಇವರು ದೇವಸ್ಥಾನ ಇರುವುದು ಹಿಂದುಗಳಿಗೆ, ಮಸೀದಿಗಳು ಇರುವುದು ಮುಸ್ಲಿಮರಿಗೆ, ಚರ್ಚ್ ಇರುವುದು ಕ್ರಿಶ್ಚನ್ ಮಂದಿಗೆ, ಶಾಲೆಗಳು ಇರುವುದು ಎಲ್ಲಾ ಸಮಾಜ ವರ್ಗದವರಿಗೆ ಎಂದು ಮುತ್ತಿನಂತಹ ಮಾತುಗಳನ್ನು ತಿಳಿಸಿದರು.

ಎಸ್.ಎಸ್. ಗಡೇದ, ದಾವಲ ಸಾಬ ನಾಗಾವಿ ಶಿಕ್ಷಣ ಸಂಸ್ಥೆ ಅಧ್ಯಕ್ಷರು, ಬಿ.ಡಿ.ಬಾಣಕರ ನಿವೃತ್ತಿ ಹೊಂದಲಿರುವ ಮುಖ್ಯ ಗುರುಗಳು ಟಿ.ಇ.ಎಂ. ಉರ್ದು ಪ್ರೌಢಶಾಲೆ ಕಲಕೇರಿ , ಇವರು ಮಕ್ಕಳು ಯಾವ ರೀತಿ ವಿದ್ಯಾಭ್ಯಾಸಗಳನ್ನು ಮಾಡಬೇಕು ವಿದ್ಯೆ ಇದ್ದರೆ ನಮಗೆ ಈ ಜಗತ್ತಿನಲ್ಲಿ ಬೆಲೆ ಎಂಬುದು ಮಕ್ಕಳಿಗೆ ತಿಳಿಸಿದರು, ಎಸ್. ಎಮ್. ಪಾಟೀಲ(ಗಣಿಹಾರ) ಅಂಜುಮನ್ ಶಿಕ್ಷಣ ಸಂಸ್ಥೆ ಸಿಂದಗಿ ಇವರು ಪಾಲಕರಲ್ಲಿ ಒಂದು ವಿನಂತಿ ಎಂದು ಮಕ್ಕಳ ಕೈಯಲ್ಲಿ ಮೊಬೈಲ್ಗಳನ್ನು ಕೊಡಬೇಡಿ ಮೊಬೈಲ್ ಗಳಿಂದ ಅವರ ಜೀವನ ಹಾಳಾಗುತ್ತೆ ಎಂದು ತಿಳಿಸಿದರು, ಅಹಮ್ಮದ ಹುಸೇನ್ ಮೋವಿ?ನ ಅಂಜುಮನ ಮದರಸ ಅಧ್ಯಕ್ಷರು ಹುಣಶ್ಯಾಳ. ಜೆ.ಬಿ.ಗುಮಶೆಟ್ಟಿ ಬಸವೇಶ್ವರ ಪ್ರೌಢಶಾಲೆ ಮುಖ್ಯ ಗುರುಗಳು ಕಲಕೇರಿ. ಎಸ್.ಎಸ್. ನಾಯ್ಕೋಡಿ. ಸಿ.ಆರ್.ಪಿ.ಕನ್ನಡ ಕಲಕೇರಿ. ಸೋಮನಗೌಡ ಕೋಟಿಖಾನಿ ಎಸ್.ಡಿ.ಎಂ. ಸಿ. ಅಧ್ಯಕ್ಷರು. ಎಸ್.ಬಿ.ಪಡಶೆಟ್ಟಿ ಮುಖ್ಯ ಗುರುಗಳು.ಕೆ.ಜಿ.ಎಸ್.ಕಲಕೇರಿ. ಡಾ.ಹಸನ ನಾಗಾವಿ . ಟಿ.ಇ.ಎಂ. ಉರ್ದು ಪ್ರೌಢ ಶಾಲೆ ಸಂಸ್ಥೆಯ ಕಾರ್ಯದರ್ಶಿಗಳು ಕಲಕೇರಿ, ಜ್ಞಾನಜೋತಿ ಶ್ರೀ ಸಿದ್ದೇಶ್ವರ ಪ್ರಾಥಮಿಕ ಶಾಲೆ ಸಂಸ್ಥೆಯ ಕಾರ್ಯದರ್ಶಿಗಳು ನಾನಾಗೌಡ ಚೌಧರಿ ಕಲಕೇರಿ, ಚಂದ್ರಕಾಂತ ಬಡಿಗೇರ. ಮಹಾಂತೇಶ ಕಾಂಬಳೆ ಬಿ ಬಿ ಇಂಗಳಗಿ ಶಿಕ್ಷಣ ಸಂಸ್ಥೆ ಅಧ್ಯಕ್ಷರು. ಅಬ್ದುಲ ರಜಾಕ ಬಾಗವಾನ. ಅಬ್ದುಲಗನಿ ತಿಂಥಣಿ ಎಸ್.ಡಿ.ಎಂ.ಸಿ. ಅಧ್ಯಕ್ಷರು. ಹುಸೇನಬಾಷಾ ನಾಗಾವಿ ಮಾಜಿ ಗ್ರಾಮ್ ಪಂಚಾಯಿತಿಯ ಸದಸ್ಯರು. ಮಹಾಂತೇಶ ಹೂಲ್ಲುರ ಹಾಸ್ಯ ಕಲಾವಿದರು. ಈ ಸಂಸ್ಥೆಯ ಸಂಚಾಲಕರು ಹಬ್ಬಾಸಲಿ ನಾಗಾವಿ. ಮುದ್ದು ಮಕ್ಕಳಿಂದ ಮನರಂಜನ ಕಾರ್ಯಕ್ರಮಗಳು ಜರುಗಿದವು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ. ಮನಗೂಳಿ. ತಾಳಿಕೋಟೆ**

## ನಾದ ಶಾಲೆಯಲ್ಲಿ 7 ವರ್ಗದ ಬೀಳ್ಕೊಡುಗೆ ಸಮಾರಂಭ ಹಾಗೂ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ



**ನಾದ ಬಿಕೆ :** ಇಂಡಿ ತಾಲೂಕಿನ ನಾದ ಬಿಕೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ೭. ನೇ ವರ್ಗದ ಬೀಳ್ಕೊಡುವ ಸಮಾರಂಭ ಹಾಗೂ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿತ್ತು . ಶಾಲೆಯ ಎಸ್ .ಡಿ.ಎಮ್ .ಸಿ ಅಧ್ಯಕ್ಷರಾದ ಶ್ರೀ ಸೋಮಯ್ಯ ಮಠಪತಿ ಇವರು ಶ್ರೀ ಶಾರದಾಂಬೆ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿದರು.ಶ್ರೀ ಎಸ್ ಡಿ ಪಾಟೀಲ (ಸ .ನೌ.ಸಂ. ಇಂಡಿ) ಇವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ–ದರು. ತದನಂತರ ಉದ್ಘಾಟನೆಯನ್ನು ಪಿಕೆಪಿಎಸ್ ಅಧ್ಯಕ್ಷರಾದ ಶ್ರೀ ಧರ್ಮಗೌಡ ಸಿ ಅವಜಿ ನೆರವೇರಿಸಿದರು .ನಂತರ ಕಾರ್ಯಕ್ರಮವನ್ನುದ್ದೇಶಿಸಿ– ಜೀವ ಜಗತ್ತಿನಲ್ಲಿ ಎಲ್ಲಾ ಪ್ರಾಣಿಗಳಿಗಿಂತ ಬುದ್ಧಿವಂತ ಸೃಜನ–ಶೀಲ ಜೀವಿ ಎಂದ–ರೆ ಅದು ಮಾನವ ಮಾತ್ರ. ಮನುಷ್ಯ ಹಕ್ಕಿಯಂತೆ ಹಾರುವುದು ಕಲಿತ, ಮೀನಿನಂತೆ ಈಜುವುದು ಕಲಿತ, ಹೀಗೆ ಕಲಿಕೆ ಎನ್ನುವುದು ಜನನದಿಂದ ಮರಣದವರೆಗೆ ಸತತವಾಗಿ ಯಾವುದೇ ರೀತಿಯ ಅನುಭವವೇ ಕಲಿಕೆ. ಆದರೆ ಕಲಿವುವ ಅನುಭವದ ಹಂತಗಳು ಮರೆಯಬಾರದು. ವಿದ್ಯಾರ್ಥಿಗಳಾದ ತಾವು ಶಿಕ್ಷಣದಲ್ಲಿ ಮುಂಬಡ್ತಿ ಹೊಂದಿ ಶಾಲೆಗೆ ಹಾಗೂ ಗ್ರಾಮದ ಹೆಸರು ಪಸರಿಸುವ ಜ್ಞಾನಿಗಳಂತೆ ವಿಜ್ಞಾನಿಗಳಾಗ ಬೇಕೆಂದು ಹೇಳಿದರು. ಶಿಲ್ಪಿ ತಾನು ವಿಕಾರವುಳ್ಳ ಕಲ್ಲು ಕಟೆದು ಒಳ್ಳೆಯ ಮೂರ್ತಿ ಮಾಡುವಂತೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಜೀವಂತ ಮೂರ್ತಿ ಮಾಡುವ ಶಿಲ್ಪಿಯಿದ್ದಂತೆ ಅಂತಹ ಶಿಲ್ಪಿ ದೇಶದ ಕೀರ್ತಿ ಮಕ್ಕಳಿಗೆ ಗುಣ–ಾತ್ಮಕ ಹಾಗೂ ಸಂಸ್ಕಾರಯುತ ಶಿಕ್ಷಣ ಸಿಗಬೇಕು,ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಬಾಲ್ಯದಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ ಮಕ್ಕಳು ಭವಿಷ್ಯದಲ್ಲಿ ಉತ್ತಮ ಶಿಕ್ಷಣ ಪಡೆದು ಗುರಿ ಮುಟ್ಟುವುದು ನೂರಕ್ಕೆ ನೂರು ಸತ್ಯ ಎಂದು ಹೇಳಿದರು. ಆದರೆ ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಗೂ ಈಗಿನ ಶಿಕ್ಷಣ ಪದ್ಧತಿಗೂ ಸ್ವಲ್ಪ ವ್ಯತ್ಯಾಸವಿದೆ. ಆಗಿನ ಕಾಲದಲ್ಲಿ ಶಿಕ್ಷಕರು ಶಿಲೆಯನ್ನು ರೂಪಿಸುವ ಶಿಲ್ಪಿಯಾಗುತ್ತಿದ್ದರು. ಆದರೆ ಈಗಿನ ಶಿಕ್ಷಣ ಪದ್ಧತಿಯಲ್ಲಿ ಶಿಲೆಯನ್ನು ರೂಪುಗೊಳ್ಳುವ ಮತ್ತು ವಿಕಾರಗಳು ಅದಕ್ಕೆ ಸಂಭಂದಿಸಿದ ಎಲ್ಲಾ ಅಸ್ತ್ರದ ಸಲಕರಣೆ ಈಗ ವಿದ್ಯಾರ್ಥಿಗಳ ಕೈಯಲ್ಲೆ ಸರ್ಕಾರ ಒದಗಿಸಿದೆ. ಅದನ್ನು ರೂಪ ಗೊಳ್ಳುವುದು ಬಿಡುವುದು ವಿದ್ಯಾರ್ಥಿಗಳ ಬಿಟ್ಟುಕೊಟ್ಟ ವಿಷಯವಾಗಿದೆ. ಆದರೆ ಈ ಶಿಲೆಗಳ ಕೆತ್ತನೆಗೆ ಶಿಕ್ಷಕರು ಕೇವಲ ಮಾರ್ಗ ದರ್ಶಕರಾಗುತ್ತಾರೆ. ಒಳ್ಳೆಯ ಮಾರ್ಗ ದರ್ಶನದಲ್ಲಿ ನಡೆದರೆ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಸತ್ಯ ಸಾಕ್ಷಾತ್ಕಾರ ವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಹೇಳಿದರು.

ಇಲ್ಲವಾದರೆ ಶಿಲೆಯ ತುಣುಕುಗಳಂತೆ ಗುಡಿಯ ಹೊರಗೆ ಪಾದ ದಡಿಯಲ್ಲಿ ಕಸ್ಟ ಅನುಭವಿಸ ಬೇಕಾಗುತ್ತದೆ .ಕೈಯಲ್ಲಿರುವ ಕನ್ನಡಿ ದುರುಪಯೋಗ ಪಡಿಸಿಕೊಳ್ಳಬೇಡಿ ಇದು ಅನುಭವದ ಮಾತು ಎಂದು ಹೇಳಿದರು. ವಿಶೇಷವಾಗಿ ಶಿರಶ್ಯಾಡ ಗ್ರಾಮದ ಶಾಲೆಯ ಮುಖ್ಯ ಗುರುಗಳಾದ ಶ್ರೀ ಎಸ್.ಎ.ಪೂಜಾರಿ ನುರಿತ,ಅನುಭವಿ, ಶಿಕ್ಷಕರು ಮಾತನಾಡಿ– ಇಂಡಿ ತಾಲೂಕಿನ ಕ್ಷೇತ್ರದಲ್ಲಿ ಹೆಚ್ಚು ಸರ್ಕಾರಿ ನೌಕರಿ ಪಡೆದ ಗ್ರಾಮವೆಂದರೆ ಅದು ನಾದ ಬಿಕೆ.ಈ ಗ್ರಾಮದಲ್ಲಿ ಗ್ರಾಮಸ್ಥರ ಸಹಕಾರ ಬಹಳವಿದೆ. ಶಿಕ್ಷಣ ಕ್ಷೇತ್ರದಲ್ಲಿ ಎತ್ತಿದ ಕೈ. – ಯಾರೂ ಮಕ್ಕಳಿಗಾಗಿ ಆಸ್ತಿ, ಅಂತಸ್ತು,ಮಾಡುವುದಕ್ಕಿಂತ ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡಿರಿ ಅಷ್ಟೇ ಅಲ್ಲದೆ ಯಾವುದೇ ಒಂದು ಕಟ್ಟಡಕ್ಕೆ ತಳ ವಿನ್ಯಾಸ ನೀಲ ನಕ್ಷೆ ಎಷ್ಟು ಮುಖ್ಯವೋ ಅಷ್ಟೇ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಪ್ರಮುಖ ತಳಪಾಯ ಈ ಪ್ರಾಥಮಿಕ ಹಂತವಾಗಿದೆ. ಮನೆಯೇ ಮೊದಲು ಪಾಠ ಶಾಲೆ ,ಜನನೀ ತಾನೆ ಮೊದಲು ಗುರು ಎಂಬಂತೆ ನಂತರ ಮಕ್ಕಳ ಎರಡನೆಯ ಹಂತವೇ ಶಾಲೆಯಾಗಿದೆ.ಅಷ್ಟೇ ಅಲ್ಲದೆ ನಮ್ಮ ಈ ಸರ್ಕಾರಿ ಶಾಲೆಯಿಂದ ಪ್ರತಿ ವರ್ಷ ವಿವಿಧ ವಸತಿ ಶಾಲೆಗಳಿಗೆ ಸಿ.ಇ.ಟಿ ಪಾಸು ಮಾಡಿಕೊಂಡು ಹೋಗುತ್ತಿರುವುದು ನಮ್ಮ ಗ್ರಾಮಕ್ಕೂ ಶಾಲೆಗೂ ಖುಷಿ ವಿಷಯ. ಇದು ಪಾಲಕ –ಮಿತ್ರರ –ಗ್ರಾಮಸ್ಥರ ಶಾಲೆಯ ಎಸ್.ಡಿ.ಎಮ್.ಸಿ.ಸದಸ್ಯರ ಆಶೀರ್ವಾದ ಎಂದು ಹೇಳಿದರು. ಶ್ರೀ ಸಿದ್ಧಾರೂಢ ಯ ಕೊಳ್ಳೂರ "ವಿಜ್ಞಾನ ವಸ್ತು ಪ್ರದರ್ಶನ" ಉದ್ಘಾಟನೆ ಮಾಡಿ, ನಂತರ ಮಾತನಾಡಿ– ಜಗತ್ತು ಪ್ರಗತಿ ಯಾಗುತ್ತಿರುವುದು ಶಿಕ್ಷಣದಿಂದ . ಶಿಕ್ಷಣದಲ್ಲಿ ಯಾವುದೇ ರೀತಿಯ ಭೇಧ–ಭಾವವಿಲ್ಲದೆ, ಶಿಕ್ಷಕರಿಗೆ,ಹಿರಿಯರಿಗೆ ಗೌರವಯುತವಾಗಿ ನಡೆದು ಕೊಳ್ಳಬೇಕು.ಅಹಂ ತೊರೆದು ಶಿಕ್ಷಣ ಪಡೆಯಬೇಕು.ಈ ವಿಜ್ಞಾನ ವಸ್ತು ಪ್ರದರ್ಶನದಂತೆ ವಿದ್ಯಾರ್ಥಿಗಳಾದ ತಾವು ಮುಂದೊಂದು ದಿನ ವಿಜ್ಞಾನಿಯಾಗಳಾಗ ಬೇಕೆಂದು ಹಿತನುಡಿ ಹೇಳಿದರು.

ವಿಶೇಷವಾಗಿ ಈ ಕಾರ್ಯಕ್ರಮದಲ್ಲಿ ತಾಲೂಕಾ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಭಾಜನರಾದ ಶ್ರೀ ಅರವಿಂದಗೌಡ ಬಿರಾದಾರ (ಶಿರಶ್ಯಾಡ) ಶ್ರೀಮತಿ ರೂಪಾ ಎಲ್ ಕೆ (ನಾದ ಬಿಕೆ)ಇವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ವೇದಿಕೆಯ ಮೇಲೆ ಶ್ರೀ ಧರ್ಮಗೌಡ ಸಿ ಅವಜಿ.ಶ್ರೀ ಸೋಮಯ್ಯ ಪಂ ಮಠಪತಿ. ಉಪನ್ಯಾಸಕರಾದ ಆಲಮೇಲ ಎ ಕೆ ನಂದಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಶಿವಾನಂದ ಎಂ ಉಪ್ಪಾರ.ಶ್ರೀ ಸಿದ್ಧಾರೂಢ ಯ ಕೊಳ್ಳೂರ.ಶ್ರೀ ಸೋಮಶೇಖರ ಮ್ಯಾಕೇರಿ.ಶ್ರೀ ಎಸ್.ಎ.ಪೂಜಾರಿ.(ಮು.ಗು) ಶ್ರೀ. ಎಸ್.ವ್ಹಿ. ಹರಳಯ್ಯ.(ಅಧ್ಯಕ್ಷರು ಪ್ರೌ.ಶಾ.ಶಿ.ಸಂ.ಇಂಡಿ). ಶ್ರೀ ಎಸ್ ಡಿ ಪಾಟೀಲ.(ಸ.ನೌ ಸಂ. ಇಂಡಿ) ಶ್ರೀ ಮಲ್ಲಿಕಾರ್ಜುನ ನೇದಲಗಿ . ಶ್ರೀ ಬಿ ಎನ್ ಜಮಾದಾರ.ಶ್ರೀ ಪಿ ಎಮ್ ನಾದ. ಶ್ರೀ ಎ.ಎಸ್.ನಾಗಣಿ.ಸ್ವಾಗತವನ್ನು ಮುಖ್ಯಗುರುಗಳಾದ ಶ್ರೀ ಎಸ್ ಜೆ ಹಿಳ್ಳಿಯವರು ಮಾಡಿದರು.ನಿರೂಪಣೆಯನ್ನು ಎಸ್ ಎಮ್ ಕುಂಬಾರ (ಶಿಕ್ಷಕರು)ನಿರ್ವಹಿಸಿದರು.ಶ್ರೀ ಬಿ ಎಸ್ ವಾಲಿ( ಶಿಕ್ಷಕರು ) . ಶ್ರೀ ಬಿ ಎಸ್ ಪಾಟೀಲ (ಶಿಕ್ಷಕರು) ಶ್ರೀ ಎ ಬಿ ರವತಗಾಂವ(ಶಿಕ್ಷಕರು) ಶ್ರೀ ಜ್ಯೋತಿ ಪರಗೊಂಡ. (ಶಿಕ್ಷಕಿಯರು) ಶ್ರೀಮತಿ ರೂಪಾ ಎಲ್ ಕೆ.(ಶಿಕ್ಷಕಿಯರು) ಶ್ರೀ ರಿಶಾಲದಾರ (ಶಿಕ್ಷಕಿಯರು) ಹಾಗೂ ಎಸ್ ಡಿ ಎಮ್ ಸಿ ಸದಸ್ಯರು, ಗ್ರಾಮಸ್ಥರು ಇತರರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಪ್ಪ. ಬಿ. ಹರಿಜನ. ಇಂಡಿ**

# ಮಕ್ಕಳ ಉತ್ತಮ ಆರೋಗ್ಯಕ್ಕಾಗಿ ಪೋಲಿಯೋ ಹನಿ: ಗಿರೆಣ್ಣವರ



**ಮೂಡಲಗಿ :** ಪಾಲಕರು ಮಕ್ಕಳ ಉತ್ತಮ ಆರೋಗ್ಯಕ್ಕಾಗಿ ಐದು ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಉತ್ತಮ ಅರೋಗ್ಯದೊಂದಿಗೆ ಆರೋಗ್ಯ ಇಲಾಖೆಯ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ಪ್ರಧಾನ ಗುರು ಹೇಳಿದರು. ಸ್ಥಳೀಯ ಆರೋಗ್ಯ ಇಲಾಖೆ ಆಶಾ ಕಾರ್ಯಕರ್ತೆಯರು ಹಾಗೂ ಶಿಕ್ಷಣ ಇಲಾಖೆ ಸಂಘಟಿಸಿದ್ದ ಪಲ್ಸ್ ಪೋಲಿಯೋ ಜಾತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ್ದರು. ಭಾರತವು ಪೋಲಿಯೋ ಮುಕ್ತ ದೇಶವಾಗಿದೆ. ಆದರೂ ಕೂಡ ಮತ್ತೆ ಮರುಕಳಿಸುವ ಸಾಧ್ಯತೆ ಇರುವದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಬಾನುವಾರ ಮಾರ್ಚ 3 ರಂದು ಕಡ್ಡಾಯವಾಗಿ ಪೋಲಿಯೋ ಲಸಿಕೆ ಕಾಹಿಸಬೇಕು ಶಾಸ್ವತ ಅಂಗವಿಕಲತೆಯನ್ನು ತರಬಲ್ಲ ಪೋಲಿಯೋವನ್ನು ಎರಡು ಹನಿ ಲಸಿಕೆಯ ಮೂಲಕ ಪ್ರತಿರೋಧಿಸೋಣ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ಮಲ್ಲಿಕಾರ್ಜುನಯ್ಯ, ಬಸವರಾಜ ನಾಯಿಕ, ಸೋಮಶೇಖರ, ಚನ್ನಬಸಪ್ಪ ಸೀರಿ, ಭಾಗೀರಥಿ ಕಳ್ಳಿಗುದ್ದಿ , ಸುಜಾತಾ ಕೋಳಿ, ಪ್ರಿಯಾಂಕಾ ಡಿ.ಕೆ., ಪುಷ್ಪಾ ಭರಮದೆ, ಲಕ್ಷ್ಮೀ ಹೆಬ್ಬಾಳ, ವಿಮಲಾಕ್ಷಿ ತೋರಗಲ್, ಕುಸುಮಾ ಚಿಗರಿ, ರೂಪಾ ಹೂಲಿಕಟ್ಟಿ, ಎಮ್.ಡಿ. ಗೋಮಾಡಿ, ಶಂಕರ ಲಮಾಣಿ, ಆಶಾ ಕಾರ್ಯಕರ್ತೆಯರಾದ ಯಲ್ಲವ್ವ ಮರ್ದಿ, ನಿರ್ಮಲಾ ಡಂಕೆನ್ನವರ, ಅರುಣಾ ಕೋರೆ, ಲಕ್ಷ್ಮೀ ತುರನೂರ, ರೇಷ್ಮಾ ಮಾವರಕರ ಮುಂತಾದವರು ಭಾಗವಹಿಸಿದ್ದರು.

# ಅನುಕಂಪ ಆಧಾರಿತ ನೇಮಕ: ಆದೇಶ ಪತ್ರ ವಿತರಿಸಿದ ಸಚಿವ ಜಾರಕಿಹೊಳಿ

**ಬೆಳಗಾವಿ :** ಗ್ರಾಮ ಪಂಚಾಯಿತಿಯಲ್ಲಿ ಅನುಕಂಪ ಆಧಾರಿತವಾಗಿ ನೇಮಕಗೊಂಡ ನೌಕರರಿಗೆ ಜಿಲ್ಲಾ ಉಸ್ತುವಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ್ ಜಾರಕಿಹೊಳಿ ಅವರು ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿದರು. ಸುವರ್ಣ ವಿಧಾನ ಸೌಧದಲ್ಲಿ ಶುಕ್ರವಾರ (ಮಾ.01) ಜರುಗಿದ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯ ನಂತರ ಗ್ರಾಮ ಪಂಚಾಯತಿಯಲ್ಲಿ ಸೇವೆಯಲ್ಲಿರುವಾಗ ಮೃತಪಟ್ಟ



ಸಿಬ್ಬಂದಿಳ ಅವಲಂಬಿತ ಕುಟುಂಬದ ಒಟ್ಟು 37 ಸಿಬ್ಬಂದಿಗಳಿಗೆ ಕರವ ಸೂಲಿಗಾರ, ಕ್ಲರ್ಕ, ಕ್ಲರ್ಕ ಕಂ. ಡಾಟಾ ಎಂಟ್ರಿ ಆಪರೇಟರ್, ವಾಟರಮೆನ್, ಸಿಪಾಯಿ, ಸ್ವಚ್ಛತಾಗಾರ ರವರ ಅವಲಂಬಿತ ಕುಟುಂಬಗಳಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ಆದೇಶ ಪತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವರು ವಿತರಿಸಿದರು.

ಈ ಸಂದರ್ಭದಲ್ಲಿ ರಾಯಬಾಗ ಶಾಸಕರಾದ ದುರ್ಯೋಧನ ಐಹೊಳೆ, ಬೆಳಗಾವಿ(ಉತ್ತರ) ಶಾಸಕ ಆಸಿಫ್(ರಾಜು) ಸೇಠ್, ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, ಖಾನಾಪುರ ಶಾಸಕ ವಿಠ್ಠಲ ಹಲಗೇಕರ್, ಕಿತ್ತೂರು ಶಾಸಕ ಬಾಬಾಸಾಹೇಬ್ ಪಾಟೀಲ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ, ಜಿಲ್ಲಾಧಿಕಾರಿಗಳಾದ ನಿತೇಶ್ ಪಾಟೀಲ, ಜಿಲ್ಲಾ ಪಂಚಾಯತ ಸಿ.ಇ.ಓ ರಾಹುಲ್ ಶಿಂಧೆ, ಜಿಲ್ಲಾ ಪಂಚಾಯತ ಅಧಿಕಾರಿಗಳಾದ ಉಪ ಕಾರ್ಯದರ್ಶಿಗಳು ಆಡಳಿತ ರೇಖಾ ಡೊಳ್ಳಿನವರ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳು ಅಭಿವೃದ್ಧಿ ಬಸವರಾಜ ಅಡವಿಮಠ, ಮುಖ್ಯ ಲೆಕ್ಕಾಧಿಕಾರಿಗಳಾದ ಪರಶುರಾಮ ದುಡಗುಂಟಿ, ಮುಖ್ಯಯೋಜನಾಧಿಕಾರಿಗಳಾದ ಗಂಗಾಧರ ದಿವಟರ್, ಸಂಬಂಧಪಟ್ಟ ಗ್ರಾಮ ಪಂಚಾಯತ ಅಧ್ಯಕ್ಷರು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಗ್ರಾಮಗಳಲ್ಲಿ ಕುಡಿಯುವ ನೀರಿನ ಅಗತ್ಯ ಕ್ರಮ ಕೈಗೊಳ್ಳಬೇಕು: ರಾಮರಡ್ಡಿ ಪಾಟೀಲ್

**ಬೆಳಗಾವಿ :** ಬರ ಹಿನ್ನೆಲೆಯಲ್ಲಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆ ಇರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮರಡ್ಡಿ ಪಾಟೀಲ್ ಅವರು ಹೇಳಿದರು. ಸ್ಥಳೀಯ ತಾಲ್ಲೂಕ ಪಂಚಾಯತ ಸಭಾಭವನದಲ್ಲಿ (ಫೆ.29) ಗುರುವಾರ ಆಯೋಜಿಸಿದ್ದ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ವ್ಯವಸ್ಥೆಯ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರಿನ ಅಭಾವ ಇರುವ ಗ್ರಾಮ



ಪಂಚಾಯತಿವರು ಮುಂಜಾಗ್ರತೆ ವಹಿಸಿ ಮೇಲಾಧಿಕಾರಿಗಳಗೆ ವರದಿ ಮಾಡಬೇಕು. ಯಾವುದೇ ಗ್ರಾಮಗಳಲ್ಲಿ ಕೂಡಿಯುವ ನೀರಿನ ತೊಂದರೆಯಾಗಂತೆ ನೋಡಿಕೊಳ ಬೇಕು. ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಗ್ರಾಮಗಳಿಗೆ ಪಿಡಿಓ ಅವರು ಭೇಟಿ ನೀಡಿ ಕುಡಿಯುವ ನೀರಿನ ಕುರಿತ ಮಾಹಿತಿಯನ್ನು ಪಡೆದು-ಕೊಂಡು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ತಿಳಿಸಿದರು.

ಕೆಲವು ಗ್ರಾಮಗಳಲ್ಲಿ ಜೆಜೆಎಮ್ ಕಾಮಗಾರಿಗಳು ಪೂರ್ಣವಾಗಿವೆ ಅಂತಹ ಗ್ರಾಮಗಳಲ್ಲಿ ಪೈಪಲೈನ್ ಜೋಡಿಸಿ ಗ್ರಾಮಗಳಿಗೆ ನೀರನ್ನು ಸರಬರಾಜು ಮಾಡಬೇಕು. ಅಗತ್ಯ ಇರುವ ಗ್ರಾಮಗಳ್ಲಲಿ ಖಾಸಗಿ ಬೋರ್ವೆಲ್ ಗಳ ಮೂಲಕ ಗ್ರಾಮಗಳಿಗೆ ನೀರು ಪೂರೈಸಬೇಕು ಎಂದು ಹೇಳಿದರು.

ಸಭೆಯಲ್ಲಿ ತಹಶೀಲ್ದಾರ ಸಿದ್ದರಾಯ ಭೋಸಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿಮಿಯರ್ ಎಸ್.ಕೆ. ಪಾಟೀಲ, ಸಹಾಯಕ ನಿರ್ದೇಶಕರು (ಪ.ರಾ) ಗಣೇಶ ಕೆ.ಎಸ್., ವ್ಯವಸ್ಥಾಪಕ ರಾಜೇಂದ್ರ ಮೊರಬದ, ತಾಲ್ಲೂಕ ಸಿಬ್ಬಂದಿಗಳಾದ ಶ್ರೀಧರ ಸರದಾರ, ರಮೇಶ ಮಾದರ ಸೇರಿದಂತೆ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಇದ್ದರು.

# ನೀತಿ ಸಂಹಿತೆ ಉಲ್ಲಂಘಿಸಿದರೆ ಕಠಿಣ ಕ್ರಮ: ತರಬೇತಿ ಕಾರ್ಯಕ್ರಮದಲ್ಲಿ ಜಿಪಂ ಸಿಇಓ ರಾಹುಲ್ ಶಿಂಧೆ ಎಚ್ಚರಿಕೆ

**ಬೆಳಗಾವಿ :** ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ನ್ಯಾಯ ಸಮ್ಮತವಾದ ಪ್ರಕ್ರಿಯೆ ಮಾಡಬೇಕು. ಚುನಾವಣಾ ಆಯೋಗವು ಸೂಚಿಸಿದ ನಿಯಮಗಳ ಪಾಲನೆ ಆಗಬೇಕು. ಈ ಸಂದರ್ಭದಲ್ಲಿ ನೀತಿ ಸಂಹಿತೆಯ ಉಲ್ಲಂಘನೆ ಮಾಡಿದಲ್ಲಿ ಕಠಿಣ ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಚಿಕ್ಕೋಡಿ ಲೋಕಸಭೆ ಕ್ಷೇತ್ರ ಚುನಾವಣಾಧಿಕಾರಿ ಹಾಗೂ ಜಿಪಂ ಸಿಇಓ ರಾಹುಲ್ ಶಿಂಧೆ ತಿಳಿಸಿದರು.

ಚಿಕ್ಕೋಡಿ ಪಟ್ಟಣದ ಕನ್ವೆನ್ಷನ್ ಹಾಲ್‌ನಲ್ಲಿ ಗುರುವಾರ (ಫೆ.29) ಚಿಕ್ಕೋಡಿ ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಕುರಿತು ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಮುದಾಯಗಳ ನಡುವೆ, ಧಾರ್ಮಿಕ ಅಥವಾ ಭಾಷಿಕ ನಡುವೆ ಉದ್ವಿಗ್ನತೆ ಉಂಟುಮಾಡುವ ಯಾವುದೇ ಚಟುವಟಿಕೆಗೆ ಅವಕಾಶ ನೀಡಬಾರದು. ಲೋಕಸಭೆ ಚುನಾವಣೆಯಲ್ಲಿ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಮೂಲಕ ಚುನಾವಣೆ ಯಶಸ್ವಿಗೊಳಿಸಬೇಕು ಎಂದರು.

ವಿಶೇಷ ಜಿಲ್ಲಾಧಿಕಾರಿ ಗೀತಾ ಕೌಲಗಿ ಮಾತನಾಡಿ, ಭಾರತ ಹೊರತುಪಡಿಸಿ ವಿಶ್ವದ ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಮಾದರಿ ನೀತಿ ಸಂಹಿತೆ ಪರಿಕಲ್ಪನೆ ಇಲ್ಲ. 1960 ಕೇರಳ ವಿಧಾನಸಭೆ ಚುನಾವಣೆಯಲ್ಲಿ



ಚುನಾವಣಾ ಆಯೋಗವು ಮೊದಲ ಬಾರಿಗೆ ಮಾದರಿ ನೀತಿ ಸಂಹಿತೆ ಜಾರಿ ಮಾಡಿತು. ಚುನಾವಣೆಗೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು, ಆಯಾ ಪಕ್ಷಗಳು ಯಾವ ರೀತಿ ನಡೆದುಕೊಳ್ಳಬೇಕು. ಯಾವ ರೀತಿ ಪ್ರಚಾರ ಕೈಗೊಳ್ಳಬೇಕು. ಅಭ್ಯರ್ಥಿಗಳು ಹಾಗೂ ಮತದಾರರು ಏನು ಮಾಡಬಾರದು. ಯಾವ ವಿಚಾರವನ್ನು ಗಮನದಲ್ಲಿಡಬೇಕು ಎಂಬುದರ ಬಗ್ಗೆ ತರಬೇತಿ ನೀಡಲಾಗುತ್ತದೆ. ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾಗಿ ತರಬೇತಿ ಪಡೆದು ತಮ್ಮ ಕರ್ತವ್ಯ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಡಿ.ಎಸ್.ಪಿ ಗೋಪಾಲ ಕೃಷ್ಣಗೌಡರ, ಪ್ರಶಾಂತ್ ಕುಮಾರ್ ಅಬಕಾರಿ ಇಲಾಖೆ ಡಿಸಿ, ಉಪವಿಭಾಗಾಧಿಕಾರಿ ಮೆಹಬೂಬ ಎನ್, ಜಿಲ್ಲಾ ಚುನಾವಣೆ ವೆಚ್ಚದ ನೋಡಲ್ ಅಧಿಕಾರಿ ಶಂಕರಾನಂದ ಬನಶಂಕರಿ, ರಾಷ್ಟ್ರೀಯ ಮಟ್ಟದ ಮಾಸ್ಟರ್ ಟ್ರೈನರ್ ಎನ್.ವಿ ಶಿರಗಾಂವಕರ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳು ಆಡಳಿತ ರೇಖಾ ಡೊಳ್ಳಿನವರ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿಗಳು ಅಭಿವೃದ್ಧಿ ಬಸವರಾಜ ಅಡವಿಮಠ, ಎ.ಆರ್.ಓ ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ತಹಶೀಲ್ದಾರರು, ಸೆಕ್ಟರ್ ಅಧಿಕಾರಿಗಳು, ಎಫ್.ಎಸ್.ಟಿ, ಎಸ್,ಎಸ್,ಟಿ, ವಿ,ಎಸ್,ಟಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

**ಬಾಗಲಕೋಟೆ :** ರಾಜ್ಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 1000 ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಈ ಹುದ್ದೆಗಳ ನೇಮಕಾತಿಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಬೇಕು. ಮಾರ್ಚ್ 3, 2024 ರಿಂದ ಎಪ್ರಿಲ್ 3, 2024 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳ ಅರ್ಹತೆ, ವಯೋಮಿತಿ, ಸ್ಪರ್ಧಾತ್ಮಕ ಪರೀಕ್ಷೆ, ಆಯ್ಕೆ ಪ್ರಕ್ರಿಯೆ ಮತ್ತು ನೇಮಕಾತಿಯ ವಿವರ ಹಾಗೂ ಪ್ರವರ್ಗವಾರು ಮತ್ತು ಜಿಲ್ಲಾವಾರು ಹುದ್ದೆಗಳ ವಿವರವನ್ನು ಹಾಗೂ ಇನ್ನಿತರ ಮಾಹಿತಿಗಾಗಿ ಕೆಇಎ ವೆಬ್‌ಸೈಟ್ http://kea.kar.nic.in ಸಂಪರ್ಕಿಸಬಹುದು. ಬಾಗಲಕೋಟೆ ಜಿಲ್ಲೆಯ ಅಭ್ಯರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿಜಿಟಲ್ ಮಾಧ್ಯಮ ಸ್ಥಾಪಿಸಲು ಸಹಾಯಧನ

**ಬಾಗಲಕೋಟೆ :** ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ದಿ ನಿಗಮದಿಂದ ಪ್ರಸಕ್ತ ಸಾಲಿಗೆ ಪರಿಶಿಷ್ಟ ಪಂಗಡದ ವಿವಿಧ ಅಭಿವೃದ್ದಿ ಕಾರ್ಯಕ್ರಮಗಳ ಕ್ರೀಯಾ ಯೋಜನೆಯಡಿ ಪತ್ರಕರ್ತರಿಗೆ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮ ಉದ್ಯಮ ಸ್ಥಾಪನೆಗೆ ಸಹಾಯಧನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮದಲ್ಲಿ ಸ್ನಾಕತೋತ್ತರ ಪದವಿ ಪಡೆದ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರು ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿ ಮಾಧ್ಯಮ ಸಂಸ್ಥೆ ಸ್ಥಾಪಿಸಲು ಘಟಕ ವೆಚ್ಚ ಶೇ.70 ರಷ್ಟು ಅಥವಾ 5 ಲಕ್ಷ ರೂ.ಗಳ ಸಹಾಯಧನವನ್ನು ನೀಡಲಾಗುತ್ತಿದೆ. ಈ ಯೋಜನೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಾರಿಗೊಳಿಸಲಾಗುತ್ತಿದೆ. ಅರ್ಜಿ ಸಲ್ಲಿಸುವವರು 30 ರಿಂದ 50 ವರ್ಷದೊಳಗಿದ್ದು, 10 ವರ್ಷಗಳ ಸೇವಾನುಭವ, ವಾರ್ಷಿಕ ಆದಾಯ 10 ಲಕ್ಷ ಮೀರದವರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ದಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ದೂಸಂ.08354-235016ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಕನ್ನಡ ನಾಮಫಲಕ ಅಳವಡಿಕೆ ಕಡ್ಡಾಯ

**ಬಾಗಲಕೋಟೆ :** ಬಾಗಲಕೋಟೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ಕಿರಾಣಿ ಸ್ಟೋರ್ಸ್, ಹೋಟೆಲ್, ಬಾರ್, ರೆಸ್ಟೋರೆಂಟ್, ಲಾಡ್ಜ್ ಮತ್ತು ಇತ್ಯಾದಿ ಟ್ರೇಡರ್ಸ್‌ದಾರರು ತಮ್ಮ ಅಂಗಡಿ ಮೇಲೆ ಬಳಸುವ ನಾಮಫಲಕವನ್ನು ಕಡ್ಡಾಯವಾಗಿ ಕನ್ನಡದಲ್ಲಿ ಕಡ್ಡಾಯವಾಗಿ ಶೇ.60ಕ್ಕಿಂತ ಹೆಚ್ಚಿಗೆ ಅಳವಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಗರಸಭೆಯಿಂದ ತೆರವುಗೊಳಿಸಿ ಪುರಸಭೆ ಕಾಯ್ದೆ 1964ರ ಪ್ರಕಾರ ಕಾನೂನಿನಂತೆ ಕ್ರಮ ಜರುಗಿಸಲಾಗುವುದೆಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಾಮಾಣಿಕ ಪ್ರಯತ್ನದಿಂದ ಯಶಸ್ಸು ಸಾಧ್ಯ: ಪ್ರಭುಶ್ರೀ



**ಮಹಾಲಿಂಗಪುರ :** ಇಂದಿನ ಆಧುನಿಕ ಯುಗದಲ್ಲಿ ಪ್ರಯತ್ನಶೀಲರಿಗೆ ಗೆಲುವು ಯಾವತ್ತಿಗೂ ಕಟ್ಟಿಟ್ಟ ಬುತ್ತಿ ಇದ್ದಂತೆ, ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಪ್ರತಿಹಂತದಲ್ಲು ಗೆಲುವು ಸಾಧ್ಯವೆಂದು ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಹೇಳಿದರು.

ಸಮೀಪದ ಗ್ರಾಮದ ಪಿಪಿ ಮಾಳಿಗಡ್ಡಿ ಮಠದ ಹಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಚಿನ್ನರ ಹೊನ್ನ ಕಿರಣೋತ್ಸವ ಹಾಗೂ ಸನ್ಮಾನ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲಿ ಸಂಸ್ಕಾರ, ಪ್ರಾಮಾಣಿಕತೆ, ವಿನಯತೆ ಪ್ರತಿಯೋಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಕಲಿಸಿದ ಗುರು ವೃಂದಕ್ಕೆ, ಹಾಗೂ ಶಾಲೆಗೆ ಕೀರ್ತಿ ತರಬೇಕು, ಈ ಶಾಲೆಯಲ್ಲಿ ವಿದ್ಯಾರ್ಜನೆ ಮಾಡಿದ ಹಲವಾರು ವಿದ್ಯಾರ್ಥಿಗಳು ಸರಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಶಾಲೆಗೆ ಮತ್ತು ಗ್ರಾಮಕ್ಕೆ ಕೀರ್ತಿ ತಂದಿದ್ದು ಶ್ಲಾಘನೀಯ ಎಂದರು. ಶಾಲೆಯ ಮುಖ್ಯ ಗುರುಮಾತೆ ಎಸ್.ಡಿ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ರಾಮಣ್ಣ ಮುಗಳಖೋಡ, ಅಣ್ಣಪ್ಪಗೌಡ ಪಾಟೀಲ, ರಾಮಪ್ಪ ಬಗನಾಳ, ರಾಛಯ್ಯ ಮಠಪತಿ, ಉಮೇಶ ಪುಜಾರಿ, ಇಲಾಹಿ ಜಮಖಂಡಿ, ಮಹಾಲಿಂಗ ಬಳಗಾರ, ಬಾಳಪ್ಪ ಗಡೆಪ್ಪನವರ, ಪೀರಸಾಬ ನದಾಫ ಅತಿಥಿಗಳಾಗಿ ಭಾಗವಹಿಸಿದ್ದರು.

ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪ್ರಮಾಣ ಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು.

## ಪ್ರಶಸ್ತಿ ಪ್ರದಾನ

**ಮಹಾಲಿಂಗಪುರ :** ಸ್ಥಳೀಯ ಜಿಎಲ್‌ಬಿಸಿಯಲ್ಲಿ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯಎಂಜಿನಿಯರಿಂಗ್ ಅವಾರ್ಡ್ ಕಮಿಟಿ ವತಿಯಿಂದ ಆದರ್ಶ ದಂಪತಿ ಸಾಧಕರತ್ನ ಪ್ರಶಸ್ತಿಯನ್ನು ವೆಂಕಟೇಶ ಹಾಗೂ ಸವಿತಾ ಬೆಳಗಲ್ಲ ದಂಪತಿಗೆ, ಸರ್ ಎಂ.ವಿಶ್ವೇಶ್ವರಯ್ಯ ಸದ್ಭಾವನಾ ಪ್ರಶಸ್ತಿಯನ್ನು ಗುತ್ತಿಗೆದಾರರಾದ ಎಂ.ಎಸ್.ಮುಗಳಖೋಡ ಹಾಗೂ ಶಿವಾನಂದ ವಾಲಿ ಅವ-ರಿಗೆ ಪ್ರದಾನ ಮಾಡಲಾಯಿತು. ಕಮಿಟಿಯ ಅಧ್ಯಕ್ಷ ಆರ್. ವೆಂಕಟೇಶ ಸೇರಿದಂತೆ ಹಲವರು ಇದ್ದರು.



# ಬಡ್ಡಿ ಸಮೇತ ಪರಿಹಾರ ಪಾವತಿಸಲು ವಿದ್ಯುತ್ ಇಲಾಖೆಗೆ ಆದೇಶ

**ಬಾಗಲಕೋಟೆ :** ಲೂಜಾಗಿ ಜೋತಾಡುತ್ತಿದ್ದ ವಿದ್ಯುತ್ ತಂತಿಯ ಸ್ಪರ್ಶದಿಂದ ಬೆಂಕಿ ಕಿಡಿ ಕಬ್ಬಿನ ಬೆಳೆಯ ಮೇಲೆ ಬಿದ್ದು, ಬೆಳೆ, ಮೋಟಾರ ಹಾಗೂ ಪೈಪ್‌ಲೈನ್ ಸುಟ್ಟಿದ್ದು, ಪರಿಹಾರ ಕೊಡಲು ನಿರಾಕರಿಸಿದ ವಿದ್ಯುತ್ ಇಲಾಖೆಗೆ ಶೇ.9ರ ಬಡ್ಡಿದರದಲ್ಲಿ ಪರಿಹಾರ ಮೊತ್ತವನ್ನು ಪಾವತಿಸಲು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ತೀರ್ಪು ನೀಡಿದೆ.

ತುಳಸಿಗೇರಿ ನಿವಾಸಿ ಹಣಮಂತ ಕೃಷ್ಣಾ ಹೊಸಕೋಟಿ ಅವರ 3.22 ಎಕರೆ ಜಮೀನಿನಲ್ಲಿ ಬೆಳೆದ ಕಬ್ಬಿಗೆ ವಿದ್ಯುತ್ ಬೆಂಕಿ ತಗುಲಿದ್ದು, ಸ್ಥಳಕ್ಕೆ ಅಗ್ನಿಶಾಮಕ ಮತ್ತು ಪೊಲೀಸ್‌ರು ಬಂದು ಹಾನಿಯಾದ ಬಗ್ಗೆ ವರದಿ ನೀಡಿದ್ದರು. ಆದರೆ ವಿದ್ಯುತ್ ಇಲಾಖೆಗೆ ಹಾನಿಗೆ ಪರಿಹಾರ ನೀಡಲು ನಿರಾಕರಿಸಿದ್ದರು. ಪರಿಹಾರಕ್ಕಾಗಿ ವಕೀಲರ ಮೂಲಕ ನೋಟಿಸ್ ನೀಡಿದರು. ಪರಿಹಾರ ಕೊಡದೇ ಇದ್ದರಿಂದ ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ದೂರು ಹಿನ್ನಲೆಯಲ್ಲಿ ಸುದೀರ್ಘ ವಿಚಾರಣೆ ಮಾಡಿದ ಆಯೋಗವು ಸೇವಾ ನ್ಯೂನ್ಯತೆ ಎಸಗಿದ ವಿದ್ಯುತ್ ಇಲಾಖೆಗೆ ಒಟ್ಟು 82,500 ರೂ.ಗಳನ್ನು ಶೇ.9ರ ಬಡ್ಡಿ ಸಮೇತ ಪರಿಹಾರ ಕೊಡಲು ಆದೇಶ ಮಾಡಿದೆ. ಅಲ್ಲದೇ ದೂರುದಾರ ಅನಾವಶ್ಯಕವಾಗಿ ಆಯೋಗಕ್ಕೆ ಅಲೆದಾಡಿ ಮಾನಸಿಕ ಹಿಂಸೆ ನೀಡಿದಕ್ಕಾಗಿ 5 ಸಾವಿರ ರೂ.ಗಳ ವಿಶೇಷ ಪರಿಹಾರ ಮತ್ತು 3 ಸಾವಿರ ರೂ. ಪ್ರಕರಣದ ಖರ್ಚು ಕೊಡುವಂತೆ ಆಯೋಗದ ಅಧ್ಯಕ್ಷ ಡಿ.ವೈ.ಬಸಾಪೂರ, ಸದಸ್ಯರಾದ ಸಿ.ಎಚ್.ಸಮಿಉನ್ನಿಸಾ ಅಬ್ರಾರ್, ಕಮಲಕಿಶೋರ ಜೋಶಿ ಒಳಗೊಂಡ ಪೀಠವು ಮಹತ್ವದ ತೀರ್ಪು ನೀಡಿದೆ.

# ಪಾಕ್ ಪರ ಘೋಷಣೆ ಕೂಗಿದವರನ್ನು ಭಾರತದಿಂದ ಒದ್ದೋಡಿಸಬೇಕು: ಯತ್ನಾಳ್ ಆಗ್ರಹ

**ವರದಿ:ಲಾಲಸಾಬ ಸವಾರಗೋಳ.**

**ವಿಜಯಪುರ :** ಮ್ಯಾನ್ಮಾರ್ ನಲ್ಲಿ ರೊಹಿಂಗ್ಯಾಗಳನ್ನು ಹೊಡೆದು ಹೊರಗಟ್ಟಿದಂತೆ ಪಾಕಿಸ್ತಾನದ ಪರ ಘೋಷಣೆ ಕೂಗಿದವರನ್ನು ಕೂಡ ಹೊಡೆದು ಭಾರತದಿಂದ ಹೊರ ಹಾಕಬೇಕಾಗುತ್ತದೆ ಎಂದು ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಿಡಿ ಕಾರಿದ್ದಾರೆ.

ಶನಿವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಾಕ್ ಪರ ಘೋಷಣೆ ಕೂಗಿದ ದೇಶದ್ರೋಹಿಗಳನ್ನು ದೇಶದಿಂದ ಹೊರಗೆ ದಬ್ಬಬೇಕಾಗುತ್ತದೆ. ಈ ಪ್ರಕರಣದ ತನಿಖೆ ನಡೆಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಕಿಡಿಕಾರಿದರು.

ಪಾಕ್ ಘೋಷಣೆ ಪ್ರಕರಣವನ್ನು ಗೃಹ ಸಚಿವ ಪರಮೇಶ್ವರ ಸೇ-ರಿದಂತೆ ಪ್ರಿಯಾಂಕ ಖರ್ಗೆ ಅವರು



ಸಮರ್ಥಿಸಿಕೊಂಡಿದ್ದರು. ಎಫ್. ಎಸ್.ಎಲ್. ವರದಿಯಲ್ಲಿ ಪಾಕ್ ಪರ ಘೋಷಣೆ ಕೂಗಿರುವುದು ಸಾಬೀತಾಗಿದ್ದರೂ ನಾಸೀರ್ ಹುಸೇನ್ ವಿರುದ್ಧ ಕಾಂಗ್ರೆಸ್ ಪಕ್ಷ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಘೋಷಣೆ ಕೂಗಿದ ಕುರಿತು ನಾನು ಮೊದಲೇ ಟ್ವೀಟ್ ಮಾಡಿದ್ದು , ಇದೀಗ ದೃಢಪಟ್ಟಿದೆ ಎಂದರು.

ಪಾಕ್ ಪರ ಘೋಷಣೆ ಕೂಗುವವರು ಪಾಕಿಸ್ತಾನಕ್ಕೆ ಹೋಗಲಿ ಎಂದು ಹ-ರಿಹಾಯ್ದ ಯತ್ನಾಳ, ಈ ಪ್ರಕರಣದ ಕುರಿತು ನಾನು ಸದನದಲ್ಲಿ ಮಾತನಾಡುವಾಗ ಖಡಕ್ ಆಗಿ ಮಾತನಾಡಿ ಎಂದು ಸ್ಪೀಕರ್ ಯು. ಟಿ. ಖಾದರ್ ಬೆಂಬಲ ನೀಡಿದ್ದಕ್ಕಾಗಿ ಅವರನ್ನು ಅಭಿನಂದಿಸುವುದಾಗಿ ಹೇಳಿದರು.

ರಾಜ್ಯದಲ್ಲಿ ಭಯೋತ್ಪಾದನೆಗೆ ಇಂಬುಕೊಡುವ ಕೆಲಸ ನಡೆಯುತ್ತಿದೆ. ಬ್ರ್ಯಾಂಡ್ ಬೆಂಗಳೂರು, ಬಾಂಬ್ ಬೆಂಗಳೂರು ಎಂಬಂತೆ ಪರಿವರ್ತನೆಯಾಗುತ್ತಿದೆ. ಕುಕ್ಕರ್ ಬಾಂಬ್ ಸ್ಫೋಟದ ಸಂದರ್ಭದಲ್ಲೂ ಕಾಂಗ್ರೆಸ್ ನಾಯಕರು ಇದೇ ರೀತಿ ಪ್ರತಿಕ್ರಿಯಿಸಿದ್ದರು ಎಂದು ಕುಟುಕಿದರು. ರಾಜ್ಯದಲ್ಲಿನ ಈ ಪರಿಸ್ಥಿತಿ ನಿಭಾಯಿಸಲು ಅಸಾಧ್ಯವಾದರೆ ಗ್ಯಾರಂಟಿ ಯೋಜನೆ ಮಾತ್ರ ಹೇಳಿಕೊಂಡು ಹೋಗಬೇಡಿ, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಬೆಂಗಳೂರಿನ ರಾಮೇಶ್ವರಂ ಹೋಟೇಲ್ ಬಾಂಬ್ ಸ್ಫೋಟ ಪ್ರಕರಣ ಉಲ್ಲೇಖಿಸಿದ ಯತ್ನಾಳ, ಈ ಕೃತ್ಯವನ್ನು ಭಜರಂಗ ದಳದ ಮೇಲೆ ಹೊರಿಸುವ ಹುನ್ನಾರವಿತ್ತು. ಬಾಂಬ್ ಸ್ಫೋಟ ಮಾಡುವವರಿಗೆ ಕರ್ನಾಟಕ ರಾಜ್ಯ ಪ್ರಯೋಗ ಶಾಲೆಯಾಗಿದೆ. ಮಾರುಕಟ್ಟೆ, ಸಿನಿಮಾ ಮಂದಿರದಂಥ ಜನನಿಬಿಡ ಪ್ರದೇಶದಲ್ಲಿ ಆಗಿದ್ದರೆ ಭಾರೀ ಅನಾಹುತ ಆಗುತ್ತಿತ್ತು ಎಂದು ಆಕ್ರೋಶ ಹೊರಹಾಕಿದರು.

ಅಯೋಧ್ಯಾ ರಾಮ ಮಂದಿರ ನಿರ್ಮಾಣ ಆಗಿರುವುದರಿಂದಲೇ ಶುಕ್ರವಾರ ದಿನವೇ ಉದ್ದೇಶಪೂರ್ವಕವಾಗಿ ಹೊಟೇಲಿನಲ್ಲಿ ಸ್ಫೋಟ ನಡೆಸಲಾಗಿದೆ. ಇವರೆಲ್ಲ ನಾಶವಾಗುವ ಕಾಲ ಹತ್ತಿರ ಬಂದಿದೆ ಎಂದು ವಾಗ್ದಾಳಿ ನಡೆಸಿದರು.

ಲೋಕಸಭೆಗೆ ಶೀಘ್ರವೇ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದ್ದು , ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ. ಸಮಾನ ನಾಗರಿಕ ಕಾಯ್ದೆ ಜಾರಿಗೆ ಬರಲಿದೆ. ಒಂದು ಕುಟುಂಬಕ್ಕೆ ಎರಡೇ ಮಕ್ಕಳು ಕಾನೂನು ಬರಲಿದೆ ಎಂದರು.

# ಹಿರಿಯ ಪತ್ರಕರ್ತ ರಾಮ ಮನಗೂಳಿ ನಿಧನಕ್ಕೆ ಕಾನಿಪ ಸಂತಾಪ

**ವಿಜಯಪುರ :** ಬಾಗಲಕೋಟೆಯ ಹಿರಿಯ ಪತ್ರಕರ್ತ ರಾಮ ಮನಗೂಳಿ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ವಿಜಯಪುರ ಜಿಲ್ಲಾ ಘಟಕದಿಂದ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಪತ್ರಿಕಾ ಭವನದಲ್ಲಿ ಸಭೆ ಆರಂಭಕ್ಕೂ ಮುನ್ನ ಮೃತರಿಗೆ ಒಂದು ನಿಮಿಷ ಮೌನ ಆಚರಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಜಯವಾಣಿ ಪತ್ರಿಕೆ ಸ್ಥಾನಿಕ ಸಂಪಾದಕ ಕೆ.ಎನ್.ರಮೇಶ ಮಾತನಾಡಿ, ಸಂಯುಕ್ತ ಕರ್ನಾಟಕ ಬಾಗಲಕೋಟ ಜಿಲ್ಲಾ ವರದಿಗಾರರಾಗಿ ತಮ್ಮ ಬರವಣಿಗೆಯ ಮೂಲಕ ಹಲವಾರು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಆಡು ಮುಟ್ಟದ ಗಿಡವಿಲ್ಲ, ಪತ್ರಕರ್ತ ರಾಮ ಮನಗೂಳಿ ಅವರು ಬರೆಯದ ವಿಷಯವಿಲ್ಲ. ಪತ್ರಿಕೋದ್ಯಮದಲ್ಲಿ ತಮ್ಮದೇಯಾದ ವಿಶೇಷ ಛಾಪು ಮೂಡಿಸಿದ್ದಾರೆ. ಎಲ್ಲ ವಿಷಯಗಳಲ್ಲಿ ಅವರಿಗೆ ಆಳವಾದ ಜ್ಞಾನ, ಅನುಭವವಿತ್ತು.




ಅವರು ಪತ್ರಿಕಾರಂಗದ ಧ್ರುವತಾರೆ ಎಂದರೆ ತಪ್ಪಾಗಲಾರದು ಎಂದರು.

ಸಂಯುಕ್ತ ಕರ್ನಾಟಕ ವಿಜಯಪುರ ಜಿಲ್ಲಾ ಮುಖ್ಯ ವರದಿಗಾರ ವಾದುದೇವ ಹೆರಕಲ್ ಮಾತನಾಡಿ, ರಾಮ ಮನಗೂಳಿ ಅವರು ಕೇವಲ ಪತ್ರಕರ್ತರಷ್ಟೇ ಆಗಿರಲಿಲ್ಲ. ಅವರೊಬ್ಬ ಉತ್ತಮ ಸಂಘಟನಾಕಾರರು ಹಾಗೂ ಹೋರಾಟಗಾರರೂ ಆಗಿದ್ದರು. ಅವರು ಸರಳ ವ್ಯಕ್ತಿಯಾಗಿದ್ದರು. ಯಾರನ್ನೂ ಅವರು ಎದುರು ಹಾಕಿಕೊಂಡವರಲ್ಲ. ಆದರೆ ಯಾರೊಂದಿಗೂ ರಾಜೀ ಮಾಡಿಕೊಳ್ಳುತ್ತಿರಲಿಲ್ಲ. ಪತ್ರಿಕಾರಂಗದಲ್ಲಿ ಅವರು ಹೆಮ್ಮರವಾಗಿ ಬೆಳೆದಿದ್ದರು ಎಂದು ಬಣ್ಣಿಸಿದರು.

ಹಿರಿಯ ಪತ್ರಕರ್ತ ಸುಶೀಲೇಂದ್ರ ನಾಯಿಕ ಮಾತನಾಡಿ, ಪತ್ರಕರ್ತ ರಾಮ ಮನಗೂಳಿ ಹಾಗೂ ನಮ್ಮ ನಡುವೆ ಒಳ್ಳೆಯ ಬಾಂಧವ್ಯವಿತ್ತು. ನಮ್ಮ ಎಲ್ಲ ಕಾರ್ಯ-ಕ್ಕೆ ಅವರು ಬೆಂಬಲ ನೀಡುತ್ತಿದ್ದರು. ಅವರ ಅಗಲಿಕೆ ನಮಗೆ ತುಂಬಾ ದು:ಖವನ್ನುಂಟು ಮಾಡಿದೆ ಎಂದು ಕಣ್ಣೀರಿಟ್ಟರು.

ಹಿರಿಯ ಪತ್ರಕರ್ತರ ಪ್ರಭು ಮಲ್ಲಿಕಾರ್ಜುನಮಠ ಮಾತನಾಡಿ, ಪತ್ರಕರ್ತ ರಾಮ ಮನಗೂಳಿ ಅವರ ಅಗಲಿಕೆ ಸುದ್ದಿ ಕೇಳಿ ನನಗೆ ಬಹಳ ವ್ಯಥೆಯಾಯಿತು. ಅವರೊಬ್ಬ ಪ್ರಭಾವಿ ಪತ್ರಕರ್ತರಾಗಿದ್ದರು. ಪತ್ರಿಕೋದ್ಯಮದಲ್ಲಿ ಅವರು ಬಹಳ ಎತ್ತರ-ಕ್ಕೆ ಬೆಳೆದಿದ್ದರು. ಅವರು ಪತ್ರಕರ್ತರಷ್ಟೇ ಆಗಿರಲಿಲ್ಲ ಕೊಡುಗೈ ದಾನಿಯೂ ಆಗಿದ್ದರು. ಹಲವಾರು ಜನರಿಗೆ ಅವರು ಸಹಾಯ ಮಾಡಿದ್ದಾರೆ. ಅವರೊಂದಿಗೆ ನನ್ನ ಒಳ್ಳೆಯ ಒಡನಾಟವಿತ್ತು. ಇಂದು ಅವರು ನಮ್ಮೊಂದಿಗೆ ಇಲ್ಲ ಎನ್ನುವುದೇ ನೋವಿನ ಸಂಗತಿ ಎಂದು ಭಾವುಕರಾದರು.

ಜಿಲ್ಲಾ ಕಾನಿಪ ಸಂಘದ ಸಲಹಾ ಸಮಿತಿ ಸದಸ್ಯ ದೇವೇಂದ್ರ ಹೆಳವರ ಮಾತನಾಡಿ, ಪತ್ರಕರ್ತ ರಾಮ ಮನಗೂಳಿ ಅವರು ಓರ್ವ ಶ್ರೇಷ್ಠ ಬರಹಗಾರರಾಗಿದ್ದರು. ಯಾವುದೇ ಭೇದಭಾವವಿಲ್ಲದೇ ಎಲ್ಲರೊಂದಿಗೆ ಸೌಜನ್ಯಯುತವಾಗಿ ನಡೆದುಕೊಳ್ಳುತ್ತಿದ್ದರು. ಅವರ ಅಗಲಿಕೆಯಿಂದ ಪತ್ರಿಕಾರಂಗ ಓರ್ವ ಶ್ರೇಷ್ಠ ಪತ್ರಕರ್ತನನ್ನು ಕಳೆದುಕೊಂಡಂತಾಗಿದೆ ಎಂದು ನುಡಿದರು.

ಪ್ರಜಾವಾಣಿ ಜಿಲ್ಲಾ ವರದಿಗಾರ ಬಸವರಾಜ ಸಂಪಳ್ಳಿ ಮಾತನಾಡಿ, ಪತ್ರಕರ್ತ ರಾಮ ಮನಗೂಳಿ ಅವರಿಗೆ ಆಳವಾದ ಅನುಭವದ ಜ್ಞಾನವಿತ್ತು. ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಸಂತ್ರಸ್ತರ ಸಮಸ್ಯೆಗಳ ಬಗ್ಗೆ ಅವರು ಬರೆದ ಹಲವಾರು ವರದಿಗಳು ಆಳುವ ಸರಕಾರಗಳ ಹಾಗೂ ಸಾರ್ವಜನಿಕರ ಗಮನ ಸೆಳೆದಿವೆ ಎಂದರು.

ವಿಜಯ ಕರ್ನಾಟಕ ದಿನಪತ್ರಿಕೆ ಜಿಲ್ಲಾ ವರದಿಗಾರ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಟಿ. ಚೂರಿ ಮಾತನಾಡಿ, ಬರವಣಿಗೆ ಮೂಲಕ ತಮ್ಮನ್ನು ರಾಜ್ಯದಲ್ಲಿ ಗುರುತಿಸಿಕೊಂಡಿದ್ದ ಪತ್ರಕರ್ತ ರಾಮ ಮನಗೂಳಿ ಅವರು, ಯುವ ಪ್ರತಿಭೆಗಳಿಗೆ, ಕಿರಿಯ ಪತ್ರಕರ್ತರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಹಿರಿಯ ಪತ್ರಕರ್ತರಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿದ್ದರೂ ಯಾವುದೇ ಹಮ್ಮು ಬಿಮ್ಮು ಅವರಲ್ಲಿರಲಿಲ್ಲ. ಅವರು ಸ್ನೇಹಜೀವಿ, ಮಾತೃಹೃದಯಿಯಾಗಿದ್ದರು ಎಂದರು.

ಕಾನಿಪ ಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಬಸವರಾಜ ಉಳ್ಳಾಗಡ್ಡಿ, ಸಲಹಾ ಸಮಿತಿ ಸದಸ್ಯ ಅಶೋಕ ಯಡಳ್ಳಿ, ಕನ್ನಡ ಕಹಳೆ ಪತ್ರಿಕೆ ಸಂಪಾದಕಿ ರಶ್ಮಿ ಪಾಟೀಲ ಮಾತನಾಡಿ, ಪತ್ರಕರ್ತ ರಾಮ ಮನಗೂಳಿ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ. ಅವರ ಅಗಲಿಕೆಯಿಂದ ಅವರ ಕುಟುಂಬಕ್ಕೆ ದೇವರು ದು:ಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಸಭೆಯಲ್ಲಿ ಕಾನಿಪ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೋಹನ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷ ಫಿರೋಜ್ ರೋಜಿನದಾರ, ಖಜಾಂಚಿ ರಾಹುಲ ಆಪ್ಟೆ ಮತ್ತಿತರರಿದ್ದರು. ಇದೇ ಸಂದರ್ಭದಲ್ಲಿ ನಿನ್ನೆ ನಿಧನರಾಗಿರುವ ಉದಯವಾಣಿ ಪತ್ರಿಕೆ ಮಂಗಳೂರು ವರದಿಗಾರ ಮನೋಹರ ಪ್ರಸಾದ್ ಅವರಿಗೂ ಶ್ರದ್ಧಾಂಜಲಿ ಸಲ್ಲಿಸಲಾಯಿತು.

### ಕನಕಗಿರಿ ಉತ್ಸವ: ಆಕರ್ಷಕ ಮ್ಯಾರಥಾನ್ ಓಟ | ರಾಜ್ಯ ಮಟ್ಟದ ಮ್ಯಾರಥಾನ್ ಓಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ

# ನಿಯಮಿತ ವ್ಯಾಯಾಮದಿಂದ ಆರೋಗ್ಯ ಸದೃಢ: ಶಿವರಾಜ್ ತಂಗಡಗಿ

**ಕೊಪ್ಪಳ :** ಕನಕಗಿರಿ ಉತ್ಸವ-2024ರ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕನಕಗಿರಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್ ಮತ್ತು ವಿವಿಧ ಇಲಾಖೆಗಳ ಸಹಯೋಗದಲ್ಲಿ ಮಾರ್ಚ್ 1ರಂದು ಕನಕಗಿರಿಯಲ್ಲಿ ಆಕರ್ಷಕ ಮ್ಯಾರಥಾನ್ ಓಟ ನಡೆಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ಹಸಿರು ನಿಶಾನೆ ತೋರಿಸುವುದರ ಮೂಲಕ ಕನಕಗಿರಿಯ ಬಸವೇಶ್ವರ ಸರ್ಕಲ್ ಹತ್ತಿರ ಚಾಲನೆ ನೀಡಿದರು. ಬಳಿಕ ಅವರು ಮಾತನಾಡಿ, ಪ್ರಪ್ರಥಮ ಬಾರಿಗೆ ಕನಕಗಿರಿ ಉತ್ಸವ ಪ್ರಯುಕ್ತ ರಾಜ್ಯ ಮಟ್ಟದ ಪುರುಷರ ಮತ್ತು ಮಹಿಳೆಯರ ಮ್ಯಾರಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದೆ. ಕನಕಗಿರಿ ಉತ್ಸವದ



ಕ್ರೀಡಾಕೂಟಕ್ಕೆ ಜನರಿಂದ ಉತ್ತಮ ಸ್ಪಂದನೆ ಸಿಗುತ್ತಿದೆ. ಇದೆ ರೀತಿಯ ಉತ್ಸವ ಮಾರ್ಚ್ 2 ಮತ್ತು 3ರಂದು ಸಿಗಲಿ. ಕನಕಗಿರಿಯು ಐತಿಹಾಸಿಕ ಪುಣ್ಯ ಕ್ಷೇತ್ರವಾಗಿದ್ದು, ಕನಕಗಿರಿ ಉತ್ಸವವನ್ನು ಅತ್ಯಂತ ವಿಜ್ರಂಭಣೆಯಿಂದ ಆಚರಣೆ ಮಾಡಲಾಗುತ್ತಿದೆ. ಕಾರ್ಯಕ್ರಮದ ಉದ್ಘಾಟನೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಆಗಮಿಸಲಿದ್ದಾರೆ. ನಾಡಿನ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ಸವಕ್ಕೆ ಮೆರಗು ನೀಡಲಿವೆ ಎಂದರು.

ನಿಯಮಿತ ವ್ಯಾಯಾಮದಿಂದ ಆರೋಗ್ಯ ಸದೃಢವಾಗಿರಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕನಕಗಿರಿ ಉತ್ಸವದ ಪ್ರಯುಕ್ತ ಏರ್ಪಡಿಸಲಾದ ರಾಜ್ಯ ಮಟ್ಟದ ಮ್ಯಾರಥಾನ್ ಓಟದಿಂದ ಜಾಗೃತಿ ಸಿಗಲಿದೆ. ಪ್ರತಿಯೊಬ್ಬರೂ ದಿನನಿತ್ಯ ಫಿಟ್ ಆಗಿರಲು ನಿಯಮಿತವಾಗಿ ವ್ಯಾಯಾಮ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಉತ್ಸವದ ಕ್ರೀಡಾ ಸಮಿತಿ ಅಧ್ಯಕ್ಷರು ಆಗಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ, ಕನಕಗಿರಿ ತಹಶೀಲ್ದಾರರಾದ ವಿಶ್ವನಾಥ ಮುರಡಿ, ತಾಲ್ಲೂಕು ಪಂಚಾಯತ್ ಇಓ ಚಂದ್ರಶೇಖರ ಕಂದಕೂರ, ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮ್ಯಾರಥಾನ್ ಓಟದ ವಿಜೇತರು: ರಾಜ್ಯ ಮಟ್ಟದ ಮ್ಯಾರಥಾನ್ ಓಟದಲ್ಲಿ ಮಹಿಳಾ ವಿಭಾಗದಲ್ಲಿ ಕನಕಗಿರಿಯ ಹೀನಾ ಕೌಸರ್ ಪ್ರಥಮ ಸ್ಥಾನ ಪಡೆದರು. ಮೈಸೂರಿನ ದ್ವೀಪ ದ್ವಿತೀಯ ಸ್ಥಾನ ಪಡೆದರೆ, ಕೊಪ್ಪಳ ಜಿಲ್ಲೆಯ ಆಫೀಯಾ ತೃತೀಯ ಸ್ಥಾನ ಪಡೆದರು. ಪುರುಷರ ವಿಭಾಗದಲ್ಲಿ ಧಾರವಾಡದ ಸಚಿನ ಪ್ರಥಮ ಸ್ಥಾನ, ಧಾರವಾಡದ ಮಣಿಕಂಠ ದ್ವಿತೀಯ, ಹುಬ್ಬಳ್ಳಿಯ ವಿಲಾಸ್ ತೃತೀಯ, ಬಳ್ಳಾರಿಯ ಚನ್ನಕೇಶವ್ ನಾಲ್ಕನೇ ಸ್ಥಾನ ಪಡೆದ-ರೆ, ಹುಬ್ಬಳ್ಳಿಯ ರಮೇಶ್ ಐದನೇಯ ಸ್ಥಾನವನ್ನು ಪಡೆದುಕೊಂಡರು.

## ತೋಟಗಾರಿಕೆ ತರಬೇತಿ: ಅರ್ಜಿ ಅಹ್ವಾನ

**ವಿಜಯಪುರ :** 2024-25ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಿಂದ 10 ತಿಂಗಳುಗಳ ಕಾಲ ತೋಟಗಾರಿಕೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಆಸಕ್ತ ರೈತರ ಮಕ್ಕಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ.

ವಿಜಯಪುರ ಜಿಲ್ಲೆಯಿಂದ ಒಟ್ಟು 17 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಬೆಳಗಾವಿಯ ಹಿಡಕಲ್ ಡ್ಯಾಂ ತೋಟಗಾರಿಕೆ ಇಲಾಖೆಯಲ್ಲಿ ತರಬೇತಿ ನೀಡಲಾಗುತ್ತದೆ.

ಅರ್ಜಿಯನ್ನು ತೋಟಗಾರಿಕೆ ಉಪನಿರ್ದೇಶಕರ ಕಚೇರಿ ಅಥವಾ ಇಲಾಖೆ ವೆಬ ಸೈಟ್ www://horticulturedir.kar.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 15 ಸಾಮಾನ್ಯ ವರ್ಗದವರಿಗೆ 30ರೂ ಅರ್ಜಿ ಶುಲ್ಕ ಇರುತ್ತದೆ. ಅರ್ಜಿ ಸಲ್ಲಿಸಲು ದಿನಾಂಕ : 01-04-2024 ಕೊನೆಯ ದಿನಾಂಕವಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸಂದರ್ಶನ ಎಪ್ರಿಲ್ 6 ರಂದು ನಡೆಯಲಿದೆ. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ 1750ರೂ ಶಿಷ್ಯವೇತನ ನೀಡಲಾಗುತ್ತದೆ. ತರಬೇತಿಯ ಅವಧಿಯಲ್ಲಿ ಇಲಾಖೆಯ ವಸತಿಗೃಹದಲ್ಲಿ ತಂಗುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ಎಸೆಸೆಲ್ಸಿ ಪಾಸ್ ಆಗಿರಬೇಕು. ತಂದೆ ಅಥವಾ ತಾಯಿ ಅಥವ ಸ್ವತಹ ತಮ್ಮ ಹೆಸರಿನಲ್ಲಿ ಜಮಿನು ಇರುವ ದಾಖಲೆ ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಹಿರಿಯ ತೋಟಗಾರಿಕೆ ನಿರ್ದೇಶಕರು ವಿಜಯಪುರ (8971851518), ಸಹಾಯಕ ತೋಟಗಾರಿಕೆ ನಿರ್ದೇಶಕರು (9972784696) ಸಹಾಯಕ ತೋಟಗಾರಿಕೆ ನಿರ್ದೇಶಕರು(7019295542) ಇವರನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## ವಿಜೃಂಬಣೆಯಿಂದ ಜರುಗಿದ ಶ್ರೀ ಅಂಬಾಭವಾನಿ ಜಯಂತ್ಯೋತ್ಸವ

**ತಾಳಿಕೋಟೆ :** ಪಟ್ಟಣದ ಭಾವಸಾರ ಕ್ಷತ್ರೀಯ ಸಮಾಜ ಬಾಂದವರ ಕುಲದೇವತೆಯಾದ ಶ್ರೀ ಅಂಬಾಭವಾನಿ ಮಂದಿರದ ಜಯಂತ್ಯೋತ್ಸವವು ಗುರುವಾರ ರಂದು ಭಕ್ತಿಭಾವದೊಂದಿಗೆ ವಿಜೃಂಬಣೆಯಿಂದ ಜರುಗಿತು.




ಜಯಂತ್ಯೋತ್ಸವ ಅಂಗವಾಗಿ ಬೆಳಗಿನ ಜಾವ ಶ್ರೀ ಅಂಬಾಭವಾನಿ ದೇವಿಯ ಮಹಾ ಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಹಾ ಮಂಗಳಾರತಿ ಕಾರ್ಯಕ್ರಮಗಳು ಜರುಗಿದವು.

ನಂತರ ಶ್ರೀ ಮಂದಿರದಲ್ಲಿ ದೇವಸ್ಥಾನದ ಅರ್ಚಕರಾದ ವೇ. ಭೀಮಾಶಂಕರ ಜೋಶಿ ಮತ್ತು ಸಂಗಡಿಗರಿಂದ ಹೋಮಹವನ ಕಾರ್ಯಕ್ರಮಗಳು ಜರುಗಿದವು.

ನಂತರ ಸುಮಂಗಲೆಯರ ಕುಂಭ, ಕಳಸ, ಫಲ್ಲಕ್ಕಿ ಉತ್ಸವದ ಹಾಗೂ ಶ್ರೀ ಅಂಬಾಭವಾನಿ ದೇವಿಯ ಭಾವಚಿತ್ರದ ಭವ್ಯ ಮೆರವಣಿಗೆಯು ಶ್ರೀ ಮಂದಿರದಿಂದ ಪ್ರಾರಂಭಗೊಂಡು ಕತ್ರಿ ಬಜಾರ, ರಾಜವಾಡೆ, ಮೂಲಕ ಭಾವನಮಠದ ಪುರಾತನ ಭಾವಿಯೊಳಗೆ ಗಂಗಸ್ಥಳ ಕಾರ್ಯಕ್ರಮದೊಂದಿಗೆ ನಾಗರ ಕಲ್ಲ ಬಡಾವಣೆ, ಶಿವಾಜಿ ಮಹಾರಾಜರ ವೃತ್ತ, ವಿಠ್ಠಲ ಮಂದಿರ ರಸ್ತೆಯ ಮೂಲಕ ಮಳಿಗೆ ದೇವಸ್ಥಾನ ತಲುಪಿತು.

ನಂತರ ಸಮಸ್ತ ಭಕ್ತಾಧಿ ಗಳಿಗೆ ಮಹಾ ಪ್ರಸಾದ ವಿತರಣೆ ಯೊಂದಿಗೆ ಜಯಂತ್ಯೋತ್ಸವ ಮಂಗಲಗೊಂಡಿತು.

ಜಯಂತ್ಯೋತ್ಸವ ಅಂಗವಾಗಿ ನಡೆದ ಸಾಮೂಹಿಕ ವಿವಾಹದಲ್ಲಿ ಒಂದು ಜೋಡಿ ವರ ಶ್ರೀಧರ ವಧು ಫಲ್ಲವಿ ಅವರ ಮಧುವೆ ಸಮಾರಂಭವನ್ನು ಸಮಾಜದ ವತಿಯಿಂದ ನಡೆಸಿಕೊಡಲಾಯಿತು.

ಇದೇ ಸಮಯದಲ್ಲಿ ಸಮಾಜದ ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿಧ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಮೆರವಣಿಗೆಯ ನೇತೃತ್ವವನ್ನು ಭಾವಸಾರ ಕ್ಷತ್ರೀಯ ಸಮಾಜದ ಉಪಾಧ್ಯಕ್ಷ ಮಲ್ಲಾರಿ ದರ್ಜಿ, ವಿಜಯ ಮಹೇಂದ್ರಕರ, ಸುಭಾಸ ಮಹೇಂದ್ರಕರ, ಯಲ್ಲಪ್ಪ ದಾಯಪುಲೆ, ಗೋಪಾಲ ಬೇದರಕರ, ಕೋನೇರಪ್ಪ ಹಂಚಾಟೆ, ಯಲ್ಲೋಜಿ ಮಹೇಂದ್ರಕರ, ಚಿನ್ನಪ್ಪ ದಾಯಪುಲೆ, ವಿಜಯ ದರ್ಜಿ, ರಾಜು ಮುಕುಂದ ಹಂಚಾಟೆ, ವೇಣಗೋಪಾಲ ಹಂಚಾಟೆ, ನಾಗೇಶ ಮಹೇಂದ್ರಕರ, ಕೃಷ್ಣಾಜಿ ಹಂಚಾಟೆ, ರಘುನಾಥ ಬಾಸುತಕರ, ಸುರೇಶ ಪುಲಸ, ಮನಿಷ ಮಹೇಂದ್ರಕರ, ವಿಜಯ ಮಹೇಂದ್ರಕರ, ಅಭಿಷೇಕ ಮಹೇಂದ್ರಕರ, ಚಂದ್ರಕಾಂತ ಗಣಾತೆ, ಶ್ರೀನಿವಾಸ ರಂಗಸುಭೆ, ಯಶ್ ಮಹೇಂದ್ರಕರ, ಲಕ್ಷ್ಮಣ ಮಹೇಂದ್ರಕರ, ತಿರುಪತಿ ಹಂಚಾಟೆ, ಮೊದಲಾದವರು ವಹಿಸಿದ್ದರು.

## ಯೋಜನಾ ನಿರ್ದೇಶಕರಿಂದ ಕೆರೆಯ ನೀರಿನ ಮಟ್ಟ ಪರಿಶೀಲನೆ

**ತಾಳಿಕೋಟೆ :** ಪಟ್ಟಣದ ಜನರಿಗೆ ಕುಡಿಯುವ ನೀರು ಪೂ-ರೈಕೆ ಮಾಡಲಾಗುತ್ತಿರುವ ಮಾಳನೂರ ಕೇರೆಯ ನೀರಿನ ಮಟ್ಟವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ವಿಜಯ ಮೆಕ್ಕಳಕಿ ಅವರು ಬುಧವಾರರಂದು ಬೆಟ್ಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಮಯದಲ್ಲಿ ಮಾತನಾಡಿದ ಅವರು ಬೇಸಗಿಯ ಕಾಲವಿರುವದರಿಂದ ತಾಳಿಕೋಟೆ ಪಟ್ಟಣದ ಜನರಿಗೆ ನೀರನ್ನು ಮಿತಿವ್ಯಯವಾಗಿ ಬಳಿಸಲು ಸೂಚಿಸಿ ನೀರು ಹೆಚ್ಚು ಪೋಲು ಮಾಡದಂತೆ ಸಲಹೆಗಳನ್ನು ನೀಡಿರಿ ಈಗಾಗಲೇ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೇರೆಗೆ ನೀರು ಹರಿಸಲಾಗುತ್ತಿದೆ ಅದರಂತೆ ನಾರಾಯಣಪೂರ ಡ್ಯಾಂನಿಂದ ನೀರು ಬಿಡುಗಡೆಯಾಗುವ ಸಾದ್ಯತೆಗಳು ಇದ್ದು ಅಲ್ಲಿಯ ವರೆಗೂ ಹೆಚ್ಚಿನ ಮುತುವರ್ಜಿ ವಹಿಸಲು ಸ್ಥಳದಲ್ಲಿಯೇ ಇದ್ದ ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ ಅವರಿಗೆ ಸೂಚಿಸಿದರು.


ಇದೇ ಸಮಯದಲ್ಲಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ



ಮೋಹನ್ ಜಾಧವ ಅವರು ಮಾರ್ಚ ಅಚಿತ್ಯದ ವರೆಗೆ ಕುಡಿಯುವ ನೀರಿನ ತೊಂದರೆಯಾಗದಷ್ಟು ಸದ್ಯಕ್ಕೆ ಕೇರೆಯಲ್ಲಿ ನೀರು ಇದ್ದು ನಂತರ ದಿನಗಳಲ್ಲಿ ನೀರು ಪೂರೈಕೆಯ ದಿನಗಳನ್ನು ವಿಸ್ತರಿಸುವ ಬಗ್ಗೆ ಆಲೋಚನೆಯನ್ನು ಹಾಕಿಕೊಂಡಿದ್ದೇವೆಂದು ನೀರು ಸರಬರಾಜುಗೆ ಸಂಬಂದಿಸಿ ಮಾಹಿತಿಯನ್ನು ಒದಗಿಸಿದರು.

ಈ ಸಮಯದಲ್ಲಿ ಪುರಸಭೆ ನೀರು ಸರಬರಾಜು ವಿಭಾಗದ ಶಂಕರಗೌಡ ಬಿರಾದಾರ, ಕಿರಿಯ ಅಭಿಯಂತರ ಸಂದೀಪ ವಠಾರ, ಮೊದಲಾದವರು ಇದ್ದರು.

## ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸಂದರ್ಶನ: 200 ಉದ್ಯೋಗ ಆಕಾಂಕ್ಷಿಗಳು ಭಾಗಿ




**ವಿಜಯಪುರ :** ಸರಕಾರಿ ಪಾಲಿಟೆಕ್ನಿಕ್ ವಿಜಯಪುರದ ಟ್ರೇನಿಂಗ್ ಮತ್ತು ಪ್ಲೇಸ್ ಮೆಂಟ್ ಸೆಲ್ ಘಟಕದಿಂದ ದಿನಾಂಕ 02-03-2024 ರಂದು ಬೆಳಿಗ್ಗೆ 10-00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಸುಜಲಾನ ಎನರ್ಜಿ ಲಿಮಿಟೆಡ್ ಕಂಪನಿಯಿಂದ ಡಿಪ್ಲೋಮಾ / ಬಿ.ಇ. ನಲ್ಲಿ ಮೆಕ್ಯಾನಿಕಲ್ / ಎಲೆಕ್ಟ್ರಿಕಲ್ ಹಾಗೂ ಅಟೋಮೊಬಾಯಿಲ್ ಕೋರ್ಸ್‌ಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕ್ಯಾಂಪಸ್ ಸಂದರ್ಶನವನ್ನು ನಡೆಸಲಾಯಿತು.

ಸದರಿ ಕಾರ್ಯಕ್ರಮದಲ್ಲಿ ಸಂಸ್ಥೆಯ ಹಾಗೂ ವಿವಿಧ ಸಂಸ್ಥೆಗಳಿಂದ ಸುಮಾರು 200 ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿ ನೋಂದಣಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಚಾರ್ಯರಾದ ಬಸವರಾಜ ಬಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಟ್ರೇನಿಂಗ್ ಮತ್ತು ಪ್ಲೇಸ್ ಮೆಂಟ್ ಸೆಲ್ ಆಫೀಸರ್ ಶ್ರೀಮತಿ ಗಿರಿಜಮ್ಮ ಯಮನಕನಮರಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಮಾತನಾಡುವ ಈಶ-ಶ್ರೀಯಲಗೂರೇಶ

ಭಾರತ ಪುಣ್ಯ ಭೂಮಿಯಲ್ಲಿ, ಕರ್ನಾಟಕ ರಾಜ್ಯವು ನಾನಾದೇವ-ಮಂದಿರಗಳ ಬೀಡು.ಶಿಲ್ಪಕಲೆಗಳ ನಾಡು,ಅದರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿರುವ ಸುಕ್ಷೇತ್ರವೇ ಯಲಗೂರ. ಉತ್ತರ ಕರ್ನಾಟಕದಲ್ಲಿಯೇ ಈಕ್ಷೇತ್ರ ಜಾಗೃತಸ್ಥಳವಾಗಿದ್ದು, ಮಾತನಾಡುವ ಭಕ್ತವತ್ಸಲ ಹನುಮ ನಿಂತಿರುವನು.

ಜಗದಲ್ಲಿ ಹನುಮನಿಲ್ಲದ ಊರುಗಳೇ ಇಲ್ಲ ಆದರೂ ಏಳು ಗ್ರಾಮಗಳಿಗೆ ಅಧಿಪತಿಯಾಗಿ ನಿಂತಿರುವನು ಏಳೂರೇಶ, ಈ ವೈಶಿಷ್ಟತೆ ಐತಿಹಾಸಿಕ, ಪುರಾಣ ಪ್ರಸಿದ್ಧವಾದ ಇತಿಹಾಸವುಂಟು. ಏಳು ಗ್ರಾಮಗಳ ಸಂರಕ್ಷಣೆ ಹೊತ್ತು ಕೃಷ್ಣಾತೀರದ ಗುಡ್ಡಪ್ರದೇಶದಲ್ಲಿ ಶ್ರೀರಾಮನಾಜ್ಞೆಯಂತೆ ನೆಲೆಸಿರುವನು. ನಂಬಿ ಬಂದ ಭಕ್ತರನ್ನು ಕೈಹಿಡಿದು ನಡೆಸುವನೆಂಬುವದು ಶತಸಿದ್ಧ ;ಏಳೂರಪ್ಪ; ಹೋಳಿಗೆ-ತುಪ್ಪ ಹೊಡಿಯಪ್ಪ'ನಮ್ಮನ್ನು ಕಾಯಪ್ಪ ಎಂಬ ವಾಣಿ ಪ್ರತಿಭಕ್ತರಲ್ಲಿ ಕ್ಷಣಕ್ಷಣಕೆ ನುಡಿಯುತ್ತಾರೆ.ಮಾತನಾಡುವ ಹನುಮನೆಂಬ ಬಿರುದು ಪಡೆಯ, ಜಗದಗಲ ಪ್ರಖ್ಯಾತನಾಗಿರುವನು.

ಸಹಸ್ರ-ಸಹಸ್ರ ಭಕ್ತರ ಆರಾದ್ಯದೈವನಾಗಿರುವನು.ಗರ್ಭಗುಡಿ ಚಿಕ್ಕದು. ಸುತ್ತಲು ಭವ್ಯವಾದ ಮಂದಿರ ಹನುಮನ ಮಾರುತಿ ಪ್ರಸನ್ನವದನ.ನೋಡಿದಾಗ ಭಕ್ತಿರಸ ಕಣ್ಣಿತುಂಬಿ ನಿಲ್ಲುವದು.ನಿತ್ಯಕೃಷ್ಣಜಲದಿಂದ ಪೂಜಾವಿಧಿವಿಧಾನಗಳು ವೈಭವದಿಂದ ನಡೆಯುತ್ತವೆ.ಕನಕ-ರಜತ-ಹವಳ-ಮುತ್ತು ನಾನಾತರಹದ ಆಭರಣಗಳಿಂದ ಭೂಷಿತವಾದ ಅಲಂಕಾರ ಕುಂಕುಮ-ವೀಳೆದೆಲೆಗಳ ಅಲಂಕಾರ ಪೂಜೆ.ಪ್ರತಿ ಶನಿವಾರ- ಅಮವಾಸ್ಯೆಗಳಲ್ಲಿ ವಿಶೇಷಪೂಜೆ-ಅನ್ನದಾಸೋಹನಡೆಯುತ್ತದೆಚೈತ್ರ-ಕಾರ್ತೀಕ ಮಾಸಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು, ಹೋಮ, ದಿಪೋತ್ಸವ ಹಬ್ಬ, ಪ್ರವಚನ ಕಾರ್ಯಗಳು ನಡೆಯುತ್ತವೆ.



ಭಾರತ ಹುಣ್ಣಿಮೆ ಆದ ನಂತರ ಬರುವ ಶನಿವಾರ-ರವಿವಾರ ಕಾರ್ತೀಕೋತ್ಸವ ಜಾತ್ರೆ ಭಕ್ತ ಸಾಗರದೊಂದಿಗೆ ವೈಶಿಷ್ಟತೆಯಲ್ಲಿ ವೈಭವದಿಂದನಡೆಯುವಭವ್ಯಜಾತ್ರೆಯಾಗಿದೆ. ಹಗಲಿರುಳು ಧಾರ್ಮಿಕಗೋಷ್ಠಿಗಳ, ಹಾಸ್ಯ ಸಾಹಿತ್ಯ ಸಮ್ಮೇಳನ, ಸಂಗೀತದ ರಸದೂಟ, ಮನರಂಜನೆ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ನಾಟಕಗಳು, ರಥೋತ್ಸವ ನಡೆಯುತ್ತವೆ.

ಈ ಜಾತ್ರೆಯಲ್ಲಿ ಅನೇಕ ಮನೆತನದವರು ತಮ್ಮದೇ ಆದ ವಿಶಿಷ್ಟ ಸೇವೆಗಳನ್ನು ಮಾಡುವ ಸಂಪ್ರದಾಯವಿದೆ.ಇದಲ್ಲದೇ ಭಕ್ತರ ಹರಕೆ ಸೇವೆಗಳೂ,ದೀಪನಮಸ್ಕಾರ,ಹೆಜ್ಜೆನಮಸ್ಕಾರ, ಮೌನ ಪ್ರದಕ್ಷಿಣೆ, ಪವಮಾನಹೋಮಗಳು ಮುಂಗಳು.ದಾಸೋಹ ಚಿತ್ರಣ, ಓಕಳಿಆಟ ಹಾಗೂ ಜಾತ್ರೆಗಳಿಗೆ ಮಳಿಗೆಗಳ ಸಾಲುಗಳು ಭಕ್ತರ ಮನತಲ್ಲಣಿಸುವವು.ಮಕ್ಕಳಿಂದ ಮುದುಕರವರೆಗೂ ದರ್ಶನಕ್ಕೆ ನಿಂತಿರುವ ಸಾಲುಗಳು ಕಾಣಬಹದು.

ಏಳೂರೇಶನ ವಿಶೇಕ್ಷತೆ- ಭಕ್ತರ ಮನದ ಪ್ರಶ್ನೆಗಳನ್ನು ಏಕಚಿತ್ತದಿಂದ ಏಳೂರೇಶನಿಗೆ ಸಮರ್ಪಿಸಿ ಅದಕ್ಕೆ ಉತ್ತರ ನೀಡುವ ಹನುಮನ ದೃಶ್ಯ ನೋಡಿದರೆ ರೋಮಾಂಚನ ಗೊಳ್ಳುವೆವು.ಹನುಮನ ಮೈಮೇಲಿನ ಚಿಗುಟು ಹಚ್ಚಿಕೊಂಡರೆ ಸರ್ವರೋಗಗಳಿಂದ ಮುಕ್ತಿ ಸಿಗುವ ನಂಬಿಕೆಯಿದೆ.ದೇವಸ್ಥಾನಕ್ಕೆ ಆಡಳಿತ ಮಂಡಳಿ ಹಾಗೂ ಪೂಜಾರಿ ಮನೆತನಗಳ ಪೂಜಾ ಪದ್ಧತಿಗಳಿಂದ ನಿತ್ಯ ಆರಾಧಿಸಲಾಗುವದು.

ಗುಡಿಯಸುತ್ತಲೂ ವೈದಿಕ ಮನೇತನಗಳಿದ್ದು,ಬಂದಭಕ್ತರಿಗೆಪ್ರೀತಿಯಿಂದ ಕರೆದು,ಅವರ ಸೇವೆಗಳಿಗೆ ಸಹಕಾರ ನೀಡುವರು.ಅನೇಕ ಮಠಗಳ ಯತಿಗಳಿಂದ ಏಳೂರೇಶನಿಗೆ ಪೂಜೆ ನಡೆದಿದೆ.ಶ್ರೀಸತ್ಯ ಪ್ರಮೋದಗುರುಗಳ ಹೆಸರಿನಲ್ಲಿ ಗೋಶಾಲೆ ಇರುವದು ಗೋಪೂಜೆ-ಗೋದಾನ ಮುಂತಾದ ಸೇವೆಗಳಿಗೆ ಅನುಕೂಲವಾಗಿದೆ. ನಿತ್ಯ ಗೋಕ್ಷೀರದಿಂದ ಏಳೂರೇಶನಿಗೆ ಪಂಚಾಮೃತ ಅಭಿಕ್ಷೇಕ ನಡೆಯುತ್ತದೆ. ಆಧ್ಯಾತ್ಮಿಕ ಚಿಂತನೆಗೆ ಜ್ಞಾನಯಜ್ಞ, ಶಿಬಿರಗಳು ನಡೆಸುವರು.

ಹೆದ್ಮೇದಾರಿ ಮೇಲೆ ಯಲಗೂರ ಸುಕ್ಷೇತ್ರವಿರುವದರಿಂದ ವಾಹನಗಳ ಸಂಚಾರಕ್ಕೂ ಅನುಕೂಲವಾಗಿದೆ. ಸರಕಾರಿ ಬಸ್ಸುಗಳು ಕಡಿಮೆ ಪ್ರಮಾಣ ಅದರೆ ಕಾರು, ಅಟೋ, ಟಂಟಿಲ ಮುಂತಾದವುಗಳು ಭಕ್ತರಿಗೆ ಬರಲು ಸಾಧ್ಯವಾಗಿದೆ. ಗ್ರಾಮದ ಜನರು,ಮುಖಂಡರು, ಭಕ್ತರು ಅನೇಕ ಗ್ರಾಮದ ಮೂಲಸೌರ್ಕಗಳಿಗಾಗಿ ಪ್ರಯತ್ನಿಸುವರು.ಒಮ್ಮೆಯಾದರೂ ಬಂದು ದರ್ಶನ ಪಡೆಯುವದೇ ನಮ್ಮೆಲ್ಲರ ಸೌಭಾಗ್ಯ ಸುತ್ತಮುತ್ತಲೂ ಸೀತೆಯಗುಡ್ಡ, ಸಾಕ್ಷಿ ವೆಂಕಟೇಶ ದೇವರು, ಹಾಗೂ ಆಲಮಟ್ಟಿ ಡ್ಯಾಂ,ಮ್ಯೂಸಿಯಂ, ಗಾರ್ಡನ ಮುಂತಾದ ಸ್ಥಳಗಳಿವೆ. ಎಲ್ಲಾಕಡೆಗಳಿಂದ ವಾಹನಗಳು ಬರಲು ಅನುಕೂಲಕರವಾಗಿದೆ.

ವಿಶ್ವ ವಿಖ್ಯಾತ ಜಗದ ಪ್ರಾಣ, ಪರಾಕ್ರಮ ಏಳೂರೇಶನ ಕೃಪೆ ಸದಾ ಎಲ್ಲರ ಮೇಲೆ ಇರಲಿ.ನಾವು ನಿತ್ಯ ಹನುಮನ ಭಜಿಸೋಣ ಜೀವನ ಸುಖಿಗೊಳಿಸೋಣ.

● ಸೌ : ಗೀತಾ. ಸಂ. ಮಿರ್ಜಿ

ರಾಜ್ಯಸಭಾ ಸದಸ್ಯ ನಾರಾಯಣ ಸಾ ಭಾಂಡಗೆ ಬಿಜೆಪಿಯಿಂದ ಸನ್ಮಾನ । ಫಲಾನುಭವಿಗಳಗಳ ಸಂಪರ್ಕ ಅಭಿಯಾನ

# ರಾಜ್ಯಸಭಾ ಸದಸ್ಯನಾದರೂ ನಾನೊಬ್ಬ ಸಾಮನ್ಯ ಕಾರ್ಯಕರ್ತ: ಭಾಂಡಗೆ



"ದೇಶದ ಉತ್ತಮ ಭವಿಷ್ಯಕ್ಕಾಗಿ ಬಿಜೆಪಿ ಹಾಗೂ ನರೇಂದ್ರ ಮೋದಿ ಅಗತ್ಯವಾಗಿದೆ. ಮೋದಿ ಗೆದ್ದರೆ ದೇಶ ಗೆದ್ದಂತೆ, ದೇಶ ಗೆದ್ದರೆ ಇಡಿ ವಿಶ್ವವೆ ಗೆದ್ದಂತೆ.

◆ ಡಾ.ವೀರಣ್ಣ ಚರಂತಿಮಠ
ಮಾಜಿ ಶಾಸಕರು ಬಾಗಲಕೋಟೆ

**ಬಾಗಲಕೋಟೆ** : ನಾನು ರಾಜ್ಯಸಭಾ ಸದಸ್ಯನಾದರೂ ನಾನೊಬ್ಬ ಸಾಮನ್ಯ ಕಾರ್ಯಕರ್ತ ನನ್ನ ಬೂತನ್ನು ಶಕ್ತಿಶಾಲಿಯಾಗಿಟ್ಟುಕೊಳ್ಳುವ ಕರ್ತವ್ಯ ನನ್ನದು ಎಂದು ರಾಜ್ಯ ಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ಅವರು ಬಿ.ವ್ಹಿ.ವ್ಹಿ.ಸಂಘದ ಮಿನಿ ಸಭಾಂಗಣದಲ್ಲಿ ಭಾರತೀಯ ಜನತಾ ಪಕ್ಷ ವಿಧಾನಸಭಾ ಕ್ಷೇತ್ರದಿಂದ ಹಮ್ಮಿಕೊಂಡ ನೂತನ ರಾಜ್ಯಸಭಾ ಸದಸ್ಯರಿಗೆ ಸನ್ಮಾನ ಹಾಗೂ ಫಲಾನುಭವಿಗಳಗಳ ಸಂಪರ್ಕ ಅಭಿಯಾನದಲ್ಲಿ ಸನ್ಮಾನ ಸ್ವಿಕರಿಸಿ ಮಾತನಾಡಿದರು.

ಪಕ್ಷಕ್ಕೆ ನಿಷ್ಠನಾದ ಕಾರ್ಯಕರ್ತರನ್ನು ಗುರುತಿಸಿ ಅವರಿಗೆ ಉನ್ನತ ಹುದ್ದೆಯಗಳನ್ನೂ ನೀಡುವ ಏಕೈಕ ಪಕ್ಷ ಅದು ಭಾರತೀಯ ಜನಾತಾ ಪಾರ್ಟಿ ಯಾಗಿದೆ, ಇಂಥ ಭಾರತೀಯ ಜನತಾ ಪಕ್ಷದ ಕಾರ್ಯಕರ್ತನಾಗಿರುದ್ದಕ್ಕೆ ನನಗೆ ಹೆಮ್ಮೆಯಿದೆ, ರಾಜ್ಯಸಭಾ ಸದಸ್ಯನಾದರೂ ಪಕ್ಷದ ಸಾಮಾನ್ಯ ಕಾರ್ಯಕರ್ತನಂತೆ ನನ್ನ ಬೂತಿನ ಸಶಕ್ತೀಕರಣದ ಕರ್ತವ್ಯವನ್ನು ನಾವೆ ವಹಿಸಿಕೊಳ್ಳವೆ,ಅದರಂತೆ ಪಕ್ಷದ ಪದಾಧೀಕಾರಿಗಳು,ಕಾರ್ಯಕರ್ತರು ತಮ್ಮ ತಮ್ಮ ಬೂತಿನ ಶಕ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕು, ನಾವೂ ಬೂತ ಗೆದ್ದರೆ ದೇಶ ಗೆದ್ದಂತೆ, ಮೊತ್ತಮ್ಮೆ ಸನ್ಮಾನ್ಯ ನರೇಂದ್ರ ಮೋದಿಯವರನ್ನು ಪ್ರಧಾನಿಯಾಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ, ಪಕ್ಷ ನನ್ನನ್ನು ಗುರುತಿಸಿ ರಾಜ್ಯಸಭಾ ಸದಸ್ಯನನ್ನಾಗಿ ಮಾಡಿರುವುದಕ್ಕೆ ಪಕ್ಷದ ಎಲ್ಲ ಹಿರಿಯರಿಗೂ ಹಾಗೂ ಸದಾ ಜೊತೆಗೆ ಇರುವ ಹಿಂದಿನ ಶಾಸಕರು ಹಿರಿಯರು ಆದ ಡಾ.ವೀರಣ್ಣ ಚರಂತಿಮಠ ಅವರಿಗೆ ಧನ್ಯವಾದಗಳನ್ನು ಸಲ್ಲಿಸುವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಹಿಂದಿನ ಶಾಸಕರಾದ ಡಾ.ವೀರಣ್ಣ ಚರಂತಿಮಠ
ನಾರಾಯಣ ಸಾ ಭಾಂಡಗೆ ಅವರು ರಾಜ್ಯಸಭಾ ಸದಸ್ಯರಾಗಿದ್ದರಿಂದ ಜಿಲ್ಲೆಯಲ್ಲಿ ಬಿಜೆಪಿ ಗೆಮತ್ತಷ್ಟು ಬಲ ಬಂದಿದೆ, ಒಬ್ಬ ನಿಷ್ಠಾವಂತ ಕಾರ್ಯಕರ್ತರಿಗೆ ಬೆಲೆ ಇದೆ ಎನ್ನುವುದ್ಕೆ ಭಾಂಡಗೆ ಅವರೆ ಸಾಕ್ಷಿಯಾಗಿದ್ದಾರೆ, ಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷ ನೀಡಿದ ಜವಾಬ್ದಾರಿಗಳನ್ನು ನಿರ್ವಹಿಸುವ ಮೂಲಕ ಮೊತ್ತಮ್ಮೆ ಸನ್ಮಾನ್ಯ ನರೇಂದ್ರ ಮೋದಿಯವರನ್ನು ಪ್ರಧಾನಿಯನ್ನಾಗಿಸೋಣ, ದೇಶದ ಅಭಿವೃದ್ಧಿಗಾಗಿ ಬಿಜೆಪಿ ಪಕ್ಷವನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರೋಣ, ಭಾರತ ವಿಶ್ವಗುರುವಾಗಲು ಭಾರತೀಯ ಜನತಾ ಪಕ್ಷದಿಂದ ಮಾತ್ರ ಸಾಧ್ಯ, ದೇಶದ ಉತ್ತಮ ಭವಿಷ್ಯಕ್ಕಾಗಿ ಬಿಜೆಪಿ ಹಾಗೂ ನರೇಂದ್ರ ಮೋದಿಜಿ ಅಗತ್ಯವಾಗಿದೆ. ಮೋದಿ ಗೆದ್ದರೆ ದೇಶ ಗೆದ್ದಂತೆ, ದೇಶ ಗೆದ್ದರೆ ಇಡಿ ವಿಶ್ವವೆ ಗೆದ್ದಂತೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಪಾಧ್ಯಕ್ಷ ಅಶೋಕ ಲಿಂಬಾವಳಿ,ರಾಜು ರೇವಣ–ಕರ, ನಗರಮಂಡಲ ಅಧ್ಯಕ್ಷ ಸದಾನಂದ ನಾರಾ, ವೀರಣ್ಣ ಹಳೆಗೌಡರ,ಗುಂಡುರಾವ ಶಿಂಧೆ, ಮಹೇಶ ಅಥಣಿ,ಗುರುಬಸವ ಸೂಳಿಬಾವಿ,ಮಹಾಂತೇಶ ಶೇಟ್ಟರ, ಸತ್ಯನಾರಾಯಣ ಹೇಮಾದ್ರಿ, ರಾಜು ಮುದೇನೂರ,ಶಿವಾನಂದ ಟವಳಿ,ಶ್ರೀಮತಿ ಭಾಗ್ಯಶ್ರೀ ಹಂಡಿ,ಅನಿತಾಸರೋದೆ,ಶಶಿಕಲಾ ಸುರೇಶ ಮಜ್ಜಗಿ,ಶೋಭಾ ರಾವ, ಬಸವರಾಜ ಹುನಗುಂದ,ಉಮೇಶ ಹಂಚಿನಾಳ, ಮಲ್ಲಿಕಾರ್ಜುನ ಕಾಂಬಳೆ,ನಾಗರಾಜ ನಾರಯಣಕರ,ಪ್ರಭು ಹಡಗಲಿ,ಸಾಗರ ಬಂಡಿ,ಬಸವರಾಜ ಅವರಾದಿ ಸೇರಿದಂತೆ ಅನೇಕರು ಇದ್ದರು.

ಇದೆ ಸಂಧರ್ಭದಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರದ ಯೋಜನೆಗಳನ್ನು ಪಡೆದ ಫಲಾನುಭಿಗಳ ಸಂಪರ್ಕ ಅಭಿಯಾನದ ಕುರಿತು ಮಾಹಿತಿ ನೀಡಲಾಯಿತು.

# ಯುವಕರು ಆರ್ಥಿಕ ಸ್ವಾವಲಂಬನೆ ಸಾಧಿಸಲಿ: ಉಮಾದೇವಿ



**ಮಹಾಲಿಂಗಪುರ** : ಇಂದಿನ ಯುವಕರು ಸರ್ಕಾರಿ ನೌಕ–ರಿಗಾಗಿ ಪರಿತಪಿಸದೇ ಸರ್ಕಾರಿ ಸವಲತ್ತುಗಳನ್ನು ಪಡೆದು ಸ್ವಯಂ ಉದ್ಯೋಗ ಆರಂಭಿಸಿ ಇತರರಿಗೂ ಉದ್ಯೋಗ ಸೃಷ್ಟಿಸಿ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕಾಗಿದೆ ಕೆನರಾ ಬ್ಯಾಂಕಿನ ವ್ಯವಸ್ಥಾಪಕಿ ಶ್ರೀಮತಿ ಉಮಾದೇವಿ ಎಂದರು.

ಪ್ರಧಾನ ಮಂತ್ರಿ ಉದ್ಯೋಗ ಸೃಜನ ಯೋಜನೆಯಡಿ ಗ್ಲೋಬಲ್ ಯುಪಿಯುಸಿ ವಿಂಡೋಸ್ ಮತ್ತು ಡೋರ್ಸ್ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶ ಯುವ ಸಂಪತ್ತಿನಿಂದ ತುಂಬಿ ತುಳುಕುತ್ತಿದೆ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವಯಂ ಉದ್ಯೋಗಕ್ಕಾಗಿ ವಿಫುಲ ಅವಕಾಶ ಕಲ್ಪಿಸಿದ್ದು ಅವುಗಳ ಸದುಪಯೋಗದಿಂದ ಯುವಕರು ಬೆಳೆದು ನಾಲ್ಕು ಜನರಿಗೆ ಉದ್ಯೋಗ ನೀಡಿ ಸ್ವಾಭಿಮಾನಿ ಮತ್ತು ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳಬಹುದಾಗಿದೆ ಎಂದರು.

ಪುರಸಭಾ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ ಪ್ರಾಸ್ತಾವಿಕವಾಗಿ ಮಾತನಾಡಿ, ಇಂತಹ ಉತ್ಪಾದನಾ ಘಟಕಗಳಿಗೆ ಕೆನರಾ ಬ್ಯಾಂಕಿನವರು ಆರ್ಥಿಕ ನೆರವು ನೀಡಿರುವುದು ಶ್ಲಾಘನೀಯ ಮತ್ತು ಮಾದರಿ ಎಂದರು.

ಅಭಿಯಂತರ ಸುನಿಲ ಕಡಪಟ್ಟಿ, ಶಿವಾನಂದ ಕನ್ನಾಳ ಹಾಗೂ ಫಲಾನುಭವಿ ಸಾನಿಯಾ ಕೌಜಲಗಿ ಸೇರಿದಂತೆ ಹಲವರು ಇದ್ದರು.

ಕನಕಗಿರಿ ಉತ್ಸವ: ಭವ್ಯ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆ ।
ಪ್ರಮುಖ ಆಕರ್ಷಣೆ ಅಂಬಾರಿ ಹೊತ್ತ 'ಲಕ್ಷ್ಮೀ' । ಕನಕಗಿರಿಯ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ

# ಕಲೆ, ಗತವೈಭವಕ್ಕೆ ಸಾಕ್ಷಿಯಾದ ಅದ್ದೂರಿಯ ಮೆರವಣಿಗೆ



**ಕೊಪ್ಪಳ** : ಕನಕಗಿರಿ ಉತ್ಸವ–2024ರ ಅಂಗವಾಗಿ ಕನಕಗಿರಿಯ ಎದುರು ಹನುಮಪ್ಪ ದೇವಸ್ಥಾನದಿಂದ ರಾಜ ಬೀದಿ ಮುಖಾಂತರ ಶ್ರೀ ಕನಕಾಚಲಪತಿ ದೇವಸ್ಥಾನದವರೆಗೆ ಮಾರ್ಚ್ 2ರಂದು ಅದ್ದೂರಿಯ ಮೆರವಣಿಗೆ ನಡೆಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಅಂಬಾರಿಯಲ್ಲಿನ ಶ್ರೀ ಕನಕಾಚಲಪತಿ ಮೂರ್ತಿಗೆ ಪುಷ್ಪಾರ್ಪಿಸಿ, ಡೊಳ್ಳು ಬಾರಿಸುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ಕನಕಗಿರಿಯ ಐತಿಹಾಸಿಕ ಪರಂಪರೆ, ಸಾಂಸ್ಕೃತಿಕ ಕಲೆ ಮತ್ತು ಗತವೈಭವಕ್ಕೆ ಸಾಕ್ಷಿಯಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಚಿಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಉತ್ಸವದ ಮೆರವಣಿಗೆ ಸಮಿತಿ ಅಧ್ಯಕ್ಷರು ಆಗಿರುವ ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್., ಕನಕಗಿರಿ ತಹಶೀಲ್ದಾರರಾದ ವಿಶ್ವನಾಥ ಮುರಡಿ, ತಾಲ್ಲೂಕು ಪಂಚಾಯತ್ ಇಓ ಚಂದ್ರಶೇಖರ ಕಂದಕೂರ ಸೇರಿದಂತೆ ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೆರವಣಿಗೆಯ ಪ್ರಮುಖ ಆಕರ್ಷಣೆ ಅಂಬಾರಿ ಹೊತ್ತ 'ಲಕ್ಷ್ಮೀ': ಕನಕಗಿರಿ ಉತ್ಸವದ ಮೆರವಣಿಗೆಯಲ್ಲಿ ಶ್ರೀ ಕನಕಾಚಲಪತಿ ಮೂರ್ತಿಯನ್ನೊಳಗೊಂಡ ಅಂಬಾರಿಯನ್ನು ಹೊತ್ತ 'ಲಕ್ಷ್ಮೀ' ಆನೆ ಪ್ರಮುಖ ಆಕರ್ಷಣೆಯನ್ನು ಪಡೆದು–ಕೊಂಡಿದೆ. ಲಕ್ಷ್ಮೀ ಆನೆಯು ಪಕ್ಕದ ವಿಜಯನಗರ ಜಿಲ್ಲೆಯ ಹಂಪಿ ವಿರೂಪಾಕ್ಷೇಶ್ವರ ಸನ್ನಿಧಿಗೆ ಸೇರಿದ್ದು, ಕನಕಗಿರಿ ಉತ್ಸವಕ್ಕಾಗಿಯೇ ತರೆಸಿಕೊಳ್ಳಲಾಗಿದೆ. ಆನೆ ಅಂಬಾರಿಯು ಮೆರವಣಿಗೆಯ ಮೆರಗನ್ನು ಹೆಚ್ಚಿಸಿತು. ಮಕ್ಕಳು ಮೆರವಣಿಗೆಯಲ್ಲಿ ಆನೆಯನ್ನು ಕಂಡು ಸಂತೋಷಗೊಂಡರು. ಯುವಕರು, ಸಾರ್ವಜನಿಕರು ಆನೆಯ ಹಾಗೂ ಅದರೊಂದಿಗೆ ಫೋಟೋ ತೆಗೆಸಿಕೊಳ್ಳುತ್ತಿರುವುದು ವಿಶೇಷವಾಗಿತ್ತು.

ವಿವಿಧ ಕಲಾ ಪ್ರಕಾರಗಳ ಪ್ರದರ್ಶನ ಆಕರ್ಷಣೀಯ: ಕನಕಗಿರಿ ಉತ್ಸವದ ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಕಂಸಾಳೆ, ಗಾರುಡಿ ಗೊಂಬೆ, ಕೋಳಿ ನೃತ್ಯ, ಲಂಬಾಣಿ ನೃತ್ಯ, ಚಂಡೆ ವಾದನ, ಗೊರವರ ಕುಣಿತ, ಜಗ್ಗಲಿಗೆ, ಪೂಜಾ ಕುಣಿತ, ಸೋಮನ ಕುಣಿತ, ವೀರಗಾಸೆ,
ಮರಗಾಲು, ಕಹಳೆ ವಾದನ, ಕಂಗಿಲು ನೃತ್ಯ, ಡೊಳ್ಳು, ಮಹಿಳಾ ವೀರಗಾಸೆ, ನಗಾರಿ, ಡೊಳ್ಳು ಕುಣಿತ, ಕೀಲು ಕುದು–ರೆ, ನಾಸಿಕ್ ಡೊಲ್, ಮೋಜಿನಗೊಂಬೆ, ತಮಟೆ ವಾದನ, ನಂದಿಧ್ವಜ, ಹಗಲುವೇಷ, ಬ್ಯಾಂಡ್, ಕೋಲಾಟ, ಕರಡಿ ಮಜಲು, ಕಣಿ ಹಲಗಿ, ಮಹಿಳಾ ತಮಟೆ ವಾದನ, ಡ್ರಮ್ ವಾದನ, ಬೇಡರ ಪಡೆ, ಹಲಗಿ ಮಜಲು, ದಾಲಪಟ, ಚಿಲಿಪಿಲಿ ಗೊಂಬೆ, ಸಂಬಾಳ ವಾದನ ಕಲೆಗಳು ಪ್ರದರ್ಶನವು ಆಕರ್ಷಣೀಯವಾಗಿತ್ತು.

ಗಮನ ಸೆಳೆದ ಸ್ತಬ್ಧಚಿತ್ರಗಳು: ಕನಕಗಿರಿ ಉತ್ಸವದ ಮೆರವಣಿಗೆಯಲ್ಲಿ ಕನಕಗಿರಿಯ ವಿವಿಧ ಶಾಲೆಗಳ ಸ್ತಬ್ಧಚಿತ್ರಗಳು ಗಮನಸೆಳೆದವು. ಇದರಲ್ಲಿ ಪ್ರಮುಖವಾಗಿ ಶ್ರೀ ಕನಕಾಚಲಪತಿ ಮಹಾರಥ ಮತ್ತು ಐತಿಹಾಸಿಕ ವೆಂಕಟಪತಿ ಬಾವಿ, ಕನಕಗಿರಿಯ ಇತಿಹಾಸದ ಮಾಹಿತಿ ಕುರಿತು ಸ್ತಬ್ಧಚಿತ್ರಗಳು ಸಾರ್ವಜನಿಕರ ಗಮನಸೆಳೆದವು.

# ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ: ನಿಷೇಧಾಜ್ಞೆ ಜಾರಿ

**ಕೊಪ್ಪಳ**:ಜಿಲ್ಲೆಯಾದ್ಯಂತ ಮಾರ್ಚ್ 01ರಿಂದ 22ರವರೆಗೆ ನಡೆಯಲಿರುವ 2024ರ ದ್ವಿತೀಯ ಪಿ.ಯು.ಸಿ ಪರೀಕ್ಷೆ–1 ರ ವಾರ್ಷಿಕ ಪರೀಕ್ಷೆಗಳ ನಿಮಿತ್ತ ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಸಿ.ಆರ್.ಪಿ.ಸಿ 1973 ರ ಕಲಂ 144 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಬೆಂಗಳೂರು ರವರು 2024ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆ–1 ರ ವಾರ್ಷಿಕ ಪರೀಕ್ಷೆಗಳನ್ನು ನಡೆಸಲಿದ್ದು, ಮಾರ್ಚ್ 01 ರಿಂದ 22 ರವರೆಗೆ ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಯವರೆಗೆ ಜಿಲ್ಲೆಯ ಕೊಪ್ಪಳ–06, ಗಂಗಾವತಿ–07, ಕುಷ್ಟಗಿ–04, ಯಲಬುರ್ಗಾ–02, ಕುಕನೂರ–01, ಕಾರಟಗಿ–01, ಕನಕಗಿರಿ ತಾಲ್ಲೂಕಿನ 01 ಪರೀಕ್ಷಾ ಕೇಂದ್ರ ಸೇರಿದಂತೆ ಒಟ್ಟು 22 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಈ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ಅವ್ಯವಹಾರ, ಅಕ್ರಮ ನಡೆಯದಂತೆ ಷರತ್ತಿಗೊಳಪಟ್ಟು ನಿಷೇಧಾಜ್ಞೆಯನ್ನು ಜಾರಿಗೊಳಿ ಸಲಾಗಿದೆ.

ಆದೇಶದನ್ವಯ ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ., ಮೊಬೈಲ್ ಪೇಜರ್, ಝರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಪತ್ರ ಪಡೆದ ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ನಕಲು ಮಾಡುವ ಸಾಮಗ್ರಿಗಳನ್ನು ಹಾಗೂ ಹೊರಗಿನಿಂದ ಕಾಪಿ ಬರೆದು ಪರೀಕ್ಷಾ ಕೇಂದ್ರಗಳಲ್ಲಿ ಪೂರೈಸುವುದನ್ನು ನಿರ್ಬಂಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

# ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಿ: ಡಾ. ರಶ್ಮಿ



**ಮಹಾಲಿಂಗಪುರ**: ಆರೋಗ್ಯ ಚೆನ್ನಾಗಿದ್ದರೆ ಎಲ್ಲ ಸಂಪತ್ತನ್ನು ಪಡೆದುಕೊಳ್ಳಬಹುದು. ಆರೋಗ್ಯ ಕೆಟ್ಟರೆ ಎಲ್ಲಾ ಸಂಪತ್ತನ್ನು ಕಳೆದುಕೊಂಡ ಹಾಗೆ ಎಂದು ರನ್ನಬೆಳಗಲಿಯ ಪ್ರಾಥಮಿಇ ಆರೋಗ್ಯಕೇಂದ್ರದ ವೈದ್ಯಾಧಿಕಾರಿ ಡಾ.ರಶ್ಮಿ ಪೂಜಾರಿ ಹೇಳಿದರು.

ಸಮೀಪದ ರನ್ನಬೆಳಗಲಿ ಪಟ್ಟಣದ ಬಂದಲಕ್ಷ್ಮೀದೇವಿ ದೇವಸ್ಥಾನದ ಮುಖ್ಯದ್ವಾರದ ಆವರಣದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಜಿಲ್ಲಾ ಆಡಳಿತ, ಜಿಲ್ಲಾ ಕೌಶಲ್ಯ ಅಭಿವೃದ್ಧಿ ಇಲಾಖೆ, ರನ್ನ ಬೆಳಗಲಿ ಪಟ್ಟಣ ಪಂಚಾಯ್ತಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಪ್ರಧಾನ ಮಂತ್ರಿ ಬೀದಿ ಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ (ಪಿ.ಎಂ. ಸ್ವನಿಧಿ)ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕುಟುಂಬದ ಭದ್ರತೆಗಾಗಿ ದುಡಿಯುವವರು ಭದ್ರತೆಗಾಗಿ ಸರ್ಕಾರದ ವಿವಿಧ ಜೀವವಿಮೆಗಳನ್ನು ಮಾಡಿಸಿಕೊಳ್ಳಬೇಕು ಎಂದರು.

ಬಾಗಲಕೋಟೆ ಕಾರ್ಮಿಕ ಇಲಾಖೆಯ ಶಿವಾನಂದ ಮಾದರ ಮಾತನಾಡಿ, ಇ–ಶ್ರಮಕಾರ್ಡಿನ ಮಹತ್ವ, ಕಾರ್ಮಿಕ–ರಿಗೆ ಪಿಂಚಣಿ ಯೋಜನೆ ಕುರಿತು ಮತ್ತು ಅವುಗಳ ನೋಂದಾಯಿಸುವ ಬಗೆಯನ್ನು ತಿಳಿಸಿದರು.ಬೀದಿ ವ್ಯಾಪಾರಸ್ಥರು ಪಟ್ಟಣ ಪಂಚಾಯ್ತಿಯಿಂದ ಪಡೆದುಕೊಳ್ಳಬಹುದಾದ ವಿವಿಧ ಸೌಲಭ್ಯಗಳ ಕುರಿತು ಪಟ್ಟಣ ಪಂಚಾಯ್ತಿ ಪ್ರಥಮದರ್ಜೆ ಸಹಾಯಕ ಪರಶುರಾಮ ನಾಗನೂರ ಮಾಹಿತಿ ನೀಡಿದರು.

ಕಂದಾಯ ಅಧಿಕಾರಿ ಸಂತೋಷ ಚವ್ಹಾಣ ಅಧ್ಯಕ್ಷತೆವಹಿಸಿದ್ದರು.ರಾಘವೇಂದ್ರನೀಲಣ್ಣವರ ಮಾತನಾಡಿದರು.

ಹುಲ್ಲಾಳದ ಹಂಸ ಧ್ವನಿ ಕಲಾ ತಂಡದ ಕಲಾವಿದರು ಬೀದಿ ನಾಟಕ ಪ್ರದರ್ಶಿಸಿ ಸರ್ಕಾರದ ವಿವಿಧ ಯೋಜನೆಗಳ ಮಹತ್ವ, ಅವುಗಳ ಬಳಕೆ ಬಗ್ಗೆ ಜಾಗೃತಿ ಮೂಡಿಸಿದರು. ಪಟ್ಟಣ ಪಂಚಾಯ್ತಿ ಸದಸ್ಯರಾದ ಮುತ್ತಪ್ಪ ಸನ್ನಟ್ಟಿ, ಮುಬಾರಕ ಅತ್ತಾರ, ಭೀಮಶಿ ಹೊಸಮನಿ, ಕರೆಪ್ಪ ಕುಂಬಾಳಿ, ನೀಲಕಂಠ ಸೈದಾಪುರ, ಆರೋಗ್ಯ ಸಿಬ್ಬಂದಿ ಮುತ್ತು ದೇವರೆಡ್ಡಿ, ಕಂದಾಯ ನಿರೀಕ್ಷಕ ಎಸ್.ಬಿ.ಚೌಧರಿ, ಸಂಪನ್ಮೂಲ ವ್ಯಕ್ತಿ ಪೂಣಂ ಕುಂಬಾರ, ಪಟ್ಟಣ ಪಂಚಾಯ್ತಿ ಸಿಬ್ಬಂದಿ ಸಚಿನ್ ಕಾಸರ, ಬಾಬು ಜಕಾತಿ, ರಾಜು ಮುಗಳಖೋಡ,ಕಲಾವಿದ ಮಹಾದೇವ ಮುರನಾಳ ಇದ್ದರು.

# ಗೆಲ್ಲಲು ಕೌಶಲ್ಯಗಳು ಬೇಕು: ಶಿವಲಿಂಗ ಸಿದ್ನಾಳ



**ಮಹಾಲಿಂಗಪುರ** : ಪರೀಕ್ಷೆಗಳಲ್ಲಿ ಎಲ್ಲ–ರಿಗೂ ಒಂದೇ ಪ್ರಶ್ನೆ ಪತ್ರಿಕೆ ಇರುತ್ತದೆ ಆದರೆ ಜೀವನದ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಒಂದೇ ಆಗಿರುವುದಿಲ್ಲ ಆ ಪರೀಕ್ಷೆಯಲ್ಲಿ ಗೆಲ್ಲುವ ಕೌಶಲ್ಯಗಳನ್ನು ಅಳವಡಿಸಿಕೊಳ್ಳಿ ಎಂದು ಪ್ರೊ.ಶಿವಲಿಂಗ ಸಿದ್ನಾಳ ಹೇಳಿದರು.

ಸ್ಥಳೀಯ ಜೆಸಿ ಆಂಗ್ಲ ಮಾಧ್ಯಮ ಶಾಲೆಯ 10 ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ದೀಪದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಹೆತ್ತವರ ಕಷ್ಟ ಅರಿತು ಏಕಾಗ್ರತೆಯಿಂದ ಓದಿ ಸಾಧನೆ ಮಾಡಿ ಎಂದರು.

10 ನೇ ತರಗತಿಯ ಪ್ರತಿ ವಿದ್ಯಾರ್ಥಿಯೂ ತನ್ನ ಜೀವನದ ಗುರಿಯನ್ನು ಹೇಳಿ ಮೇಣದ ಬತ್ತಿ ಬೆಳಗಿಸಿ ಪ್ರತಿಜ್ಞೆ ಮಾಡಿ ಗುರು ಹಿರಿಯರ ಆಶೀರ್ವಾದ ಕೋರಿದ್ದು ವಿಶೇಷವೆನಿಸಿತು. ನಂತರ 9 ನೇ ತರಗತಿ ಮಕ್ಕಳಿಗೆ ದೀಪದಾನ ಮಾಡಿದರು.

ಸಂಸ್ಥೆಯ ನಿರ್ದೇಶಕರಾದ ರಾಜು ಘಟ್ಟೆಪ್ಪನವರ, ಈಶ್ವರ ಮುರಗೋಡ, ಮುಖ್ಯ ಶಿಕ್ಷಕ ಎಸ್.ಜಿ.ಕೌಜಲಗಿ, ಶಿಕ್ಷಕ ನಾರನಗೌಡ ಉತ್ತಂಗಿ, ಶಿಕ್ಷಕಿಂ–ಯರಾದ ಸುಧಾ ಕೊಂಗವಾಡ, ಸುಜಾತ ಹೊಸಕೇರಿ, ವಿದ್ಯಾರ್ಥಿ ಪ್ರತಿನಿಧಿಗಳಾದ ಜಗದೀಶ ನಾಗನೂರ, ಪಲ್ಲವಿ ಸಿಂಗಾಡಿ ಮಾತನಾಡಿದರು, 10 ನೇ ತರಗತಿಯ ಶ್ರೇಯಸ್ ಸಾವಳಗಿಮಠ, ಆರ್ಯನ್ ಶುಕ್ಲಾ, ಸಾಧಿಕ್ ಬರಗಿ, ಅಂಕಿತಾ ರಾಥೋಡ, ಸವಿತಾ ಹುದ್ದಾರ, ತೈಬಾ ನಂದಗಡ್ಕರ್, ಸುಪ್ರೀತ್ ಕೋಳಿ ಅನಿಸಿಕೆ ಹಂಚಿಕೊಂಡರು. ಸಂಸ್ಥೆಯ ಅಧ್ಯಕ್ಷ ಶಾಂತಿಲಾಲ ಪಟೇಲ ಉದ್ಘಾಟಿಸಿದರು, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಜಿಲ್ಲಾ ಕಾರ್ಯಕಾ–ರಿಣಿ ಸದಸ್ಯ ಎಸ್.ಎಸ್.ಈಶ್ವರಪ್ಪಗೋಳ, ಶಿಕ್ಷಕ ಎಸ್.ಪಿ. ಸುತಾರ ಇದ್ದರು.

ವಿದ್ಯಾರ್ಥಿಗಳಾದ ನಂದಿನಿ ರಂಜನಗಿ, ಸಿಂಚನಾ ಬಾಗೇವಾಡಿ, ಸಾಕ್ಷಿ ಗೊಂದಿ, ಮಹಾಲಕ್ಷ್ಮೀ ಗುಳದಳ್ಳಿ, ವರ್ಷಿತಾ ಉತ್ತಂಗಿ, ರೆಹನುಮಾ ಮುಜಾವರ, ನೀಲಕಂಠ ಪುಠ್ಯಾಗೋಳ, ವಿಶಾಲ ಮುರಗೋಡ, ಸಿದ್ಧಾರೂಢ ಪುಠ್ಯಾಗೋಳ, ಉದಯ ಮುಂಡಾಸ, ಸುಮಯ್ಯಾ ಕಡಕೋಳ, ನೆಹರಾ ಮಾಹುತ್, ಭೂಮಿ ಕಾಕಡೆ, ಅರ್ಫಾ ಖಲೀಫಾ, ಅನುಶ್ರೀ ಹುದ್ದಾರ, ಶ್ರೇಯಾ ಸಗರಿ, ಲಕ್ಷ್ಮಿ ಅಮಾತಿ, ವೇದಿಕಾ ಜಾನಕೂನವರ, ಸೃಷ್ಟಿ ಮುಗಳಖೋಡ, ಅಲ್ಫಿಯಾ ಮರೇಗುದ್ದಿ ಕಾರ್ಯಕ್ರಮವನ್ನು ಸಂಘಟಿಸಿದ್ದರು.

## ಯಲ್ಲಪ್ಪ ಎಸ್.ಮಾಂಗ ನಿಧನ



**ಮಹಾಲಿಂಗಪುರ** : ಸಮೀಪದ ಸೈದಾಪೂರ ಗ್ರಾಮದ ನಿವಾಸಿ, ಕುಷ್ಟಗಿ ತಾಲೂಕಿನಲ್ಲಿ ಪಿಡಿಓ ಆಗಿ ಕಾರ್ಯನಿರ್ವಹಿಸುತ್ತಿದ್ದ ಯಲ್ಲಪ್ಪ ಎಸ್.ಮಾಂಗ ಶುಕ್ರವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ವಸ್ತುಗಳ ಪ್ರದರ್ಶನದಿಂದ ಮಕ್ಕಳ ಪ್ರತಿಭೆ ಅನಾವರಣ: ಹಿರೇಮಠ



**ತಾಳಿಕೋಟೆ** : ವಿಜ್ಞಾನ ಕ್ಷೇತ್ರದ ಅರಿವು ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ತಾಳಿಕೋಟೆಯ ಎಸ್.ಕೆ. ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಶಿಕ್ಷಕರ ಮತ್ತು ವಿಧ್ಯಾರ್ಥಿಗಳ ಪಾತ್ರ ಮೆಚ್ಚುವಂತಹದ್ದಾಗಿದೆ ಎಂದು ವೀರಶೈವ ವಿದ್ಯಾವರ್ದಕ ಸಂಘದ ಅಧ್ಯಕ್ಷರಾದ ವ್ಹಿ.ಸಿ. ಹಿರೇಮಠ (ಹಂಪಿಮುತ್ಯಾ) ಅವರು ನುಡಿದರು.

ಬುಧವಾರರಂದು ಸ್ಥಳೀಯ ಎಸ್.ಕೆ.ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಏರ್ಪಡಿಸಲಾದ ಕಲಾ ಮತ್ತು ವಿಜ್ಞಾನ ಮಾದರಿ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ನಮ್ಮ ಭಾರತ ದೇಶದಲ್ಲಿ ಅನೇಕ ವಿಜ್ಞಾನಿಗಳು ತಮ್ಮಲ್ಲಿಯ ವಿಜ್ಞಾನದ ಕಲೆಯನ್ನು ಬಿತ್ತರಿಸಿ ಭಾರತ ದೇಶ ಯಾವದಕ್ಕೂ ಕಡಿಮೆ ಇಲ್ಲಾವೆಂಬುದನ್ನು ಅನ್ಯ ದೇಶಿಕರಿಗೆ ತೋರಿಸಿಕೊಟ್ಟಿದ್ದಾರೆಂದರು. ತಾಂತ್ರಿಕವಾಗಿ ಬೆಳೆಯುತ್ತಿರುವ ಇಂದಿನ ಯುಗವನ್ನು ಜ್ಞಾನದ ಯುಗ ಸ್ಪರ್ದಾತ್ಮಕ ಯುಗದಲ್ಲಿ ಅಕ್ಷರ ಅಭ್ಯಾಸದ ಜೊತೆಗೆ ಜ್ಞಾನದ ಅವಶ್ಯಕತೆ ಇಂದಿನ ದಿನಗಳಲ್ಲಿ ಹೆಚ್ಚಾಗುತ್ತಾ ಸಾಗಿದೆ ಅದರಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಹಂತದಲ್ಲಿಯೇ ಮಕ್ಕಳಿಗೆ ವಿಜ್ಞಾನದ ಶಿಕ್ಷಣ ಕುರಿತು ಅಬಿರುಚಿ ಬೆಳೆಸುವದು ಅತ್ಯವಶ್ಯಕವಾಗಿದೆ ಈ ನಿಟ್ಟಿನಲ್ಲಿ ಆಯೋಜಿಸಲಾದ ಇಂದಿನ ವಸ್ತು ಪ್ರದರ್ಶನಗಳನ್ನು ನೋಡಿದರೆ ಮಕ್ಕಳ ಪ್ರತಿಭೆಗೆ ಅನಾವರಣಕ್ಕೆ ಅನುಕೂಲವಾಗಲಿದೆ ಎಂದರು.

ವಸ್ತು ಪ್ರದರ್ಶನದಲ್ಲಿ ವಿಜ್ಞಾನಕ್ಕೆ ಸಂಬಂದಿತ ಪರಮಾಣುಕ್ಕೆ ಸಂಬಂದಿಸಿದ್ದ ರಚನೆ ಪರಿಸರ ಮಾಲಿನ್ಯ ನಿಯಂತ್ರಣ, ಸ್ವ–ಯಂ ಚಾಲಿತ ಚಂದ್ರಯಾನ 3, ಸ್ವಾಸಕ್ರೀಯೇ ಕುರಿತು ಸಾವಯವ ಕೃಷಿ ಕುರಿತು, ಜಲ ಚಕ್ರ, ಆಗೂ ವಾಯು ಮಾಲಿನ್ಯ, ಶಬ್ದ ಮಾಲಿನ್ಯ ಒಳಗೊಂಡ ನಾನಾ ಬಗೆಯ 1ನೇ ತರಗತಿಯಿಂದ 9 ನೇ ತರಗತಿಯವರೆಗಿನ ವಿದ್ಯಾರ್ಥಿನಿಯರು ಪ್ರದರ್ಶನ ನೀಡಿ–ದ್ದು ಆಕರ್ಷಮಯವಾಗಿದ್ದವು.

ವೀ.ವಿ.ಸಂಘದ ಕಾರ್ಯದರ್ಶಿ ಎಂ.ಎಸ್.ಸರಶೆಟ್ಟಿ, ಸಹ ಕಾರ್ಯದರ್ಶಿ ಕಾಶಿನಾಥ ಮುರಾಳ ಅವರು ವಿಧ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಶಿಕ್ಷಕ, ಶಿಕ್ಷಕಿಯರ ಸೇವಾ ಕಾರ್ಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಮಯದಲ್ಲಿ ಪ್ರೋಜೇಕ್ಟರ್ ಮುಖಾಂತರ ಸೂರ್ಯನ ಸುತ್ತ ತಿರುಗುವ ಗ್ರಹಗಳು ಅವುಗಳ ಆದಾರ ಬ್ಯಾರಿ ಶೆಂಟರ್ ಕುರಿತು ವಿಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು.

ಈ ಸಮಯದಲ್ಲಿ ಎಸ್.ಕೆ. ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ಅಧ್ಯಕ್ಷ ವೇ.ಮುರುಘೇಶ ವಿರಕ್ತಮಠ, ವೀ.ವಿ.ಸಂಘದ ನಿರ್ದೇಶಕರಾದ ರಮೇಶ ಸಾಲಂಕಿ, ಆಡಳಿತ ಮಂಡಳಿಯ ಸದಸ್ಯ ಸಂತೋಷ ಮುರಾಳ, ಶಾಲಾ ಆಡಳಿತ ಅಧಿಕಾರಿ ಎಸ್.ಎ.ಶರಣರ, ಮುಖ್ಯಗುರುಗಳಾದ ಶ್ರೀಮತಿ ಲಕ್ಷ್ಮೀ ಮಣೂರ, ಗೀತಾ ಹಿರೇಮಠ, ಹಾಗೂ ಶಿಕ್ಷಕ, ಶಿಕ್ಷಕಿಯರು, ಪಾಲಕರು ಉಪಸ್ಥಿತರಿದ್ದರು.

# ಶ್ರೀ ಖಾಸ್ಗತ ಮಠಕ್ಕೆ ಅಟವಿ ಶ್ರೀಗಳ ಭೇಟಿ



**ತಾಳಿಕೋಟೆ** : ಇತ್ತೀಚಗೆ ಲಿಂಗೈಕ್ಯರಾದ ಸಂಗಯ್ಯ ವಿರಕ್ತಮಠ ಅವರ ವಿಷಯ ಅರೀತ ಅಟವಿಯ ಶ್ರೀ ಶಿವಲಿಂಗ ಮಹಾಸ್ವಾಮಿಗಳು ಶ್ರೀ ಖಾಸ್ಗತೇಶ್ವರ ಮಠಕ್ಕೆ ಬುಧವಾರರಂದು ಬೆಟ್ಟಿ ನೀಡಿದರಲ್ಲದೇ ಶ್ರೀಮಠದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರುಗಳಿಗೆ, ಶ್ರೀಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಅವರೊಂದಿಗೆ ಘಂಟೆಕಾಲ ಚರ್ಚಿಸಿದರಲ್ಲದೇ ಯುವ ವಯಸ್ಸಿನಲ್ಲಿಯೇ ಆರೋಗ್ಯವಂತರಾಗಿದ್ದ ಸಂಗಯ್ಯ ವಿರಕ್ತಮಠ ಅವರು ಸ್ವರ್ಗಸ್ಥರಾಗಿರುವದು ವಿಚಿತ್ರವೆನಿಸುತ್ತದೆ ಎಂದ ಅವರು ಲಿಂ.ಸಂಗಯ್ಯನವರ ಬಳಿ ಇದ್ದ ಆತ್ಮೀಯ ಭಾವನೆಗಳ ಬಗ್ಗೆ ಭಕ್ತರೊಂದಿಗೆ ಇದ್ದ ಅವರ ಒಳ್ಳೆಯ ಒಡನಾಟ, ಅವರ ಪ್ರೀತಿ ಪ್ರೇಮಗಳ ಕುರಿತು ಶ್ರೀಗಳು ಬಣ್ಣಿಸಿದರು.

ಈ ಸಮಯದಲ್ಲಿ ಔಷಧ ವ್ಯಾಪಾರಸ್ಥರಾದ ರಮೇಶ ಸಾಲಂಕಿ ಹಾಗೂ ಶ್ರೀಮತಿ ಅಕ್ಕಮಹಾದೇವಿ ವಿರಕ್ತಮಠ, ಶರಣಯ್ಯ ಹಿರೇಮಠ, ಹಿರಿಯ ಪತ್ರಕರ್ತರಾದ ಜಿ.ಟಿ. ಘೋರ್ಪಡೆ, ಅವರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State